ಭದ್ರಗೀತಾವಲಿ.

NR N16
1700

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY

॥ ಶ್ರೀ ॥

ಸತೀಹಿತೈಷಿಣೀ ಗ್ರಂಥಮಾಲಾ

# ಭದ್ರಗೀತಾವಲಿ.

(ಮಾತೃನಂದಿನಿಯ ಸನ್ಮಾನಪುಸ್ತಕ. ಹಿತೈಷಿಣೀವರ್ಗಣೀದಾರರಿಗೆ ಮಾತ್ರ)

ಪ್ರಥಮ ಮುದ್ರಣ ೧೦೦೦ ಪ್ರತಿಗಳು

ನಂಜನಗೂಡು

ಸತೀಹಿತೈಷಿಣೀ ಮಾತೃಮಂದಿರದಲ್ಲಿ

ಪ್ರಕಟಿಸಲ್ಪಟ್ಟುದು.

(ಇದರ ಸರ್ವಸ್ವಾತಂತ್ರ್ಯವೂ ಸತೀಹಿತೈಷಿಣಿಯವರಿಗೇ ಸೇರಿರುವುದು.)

Price 0-4-0 ]   [ ಕ್ರಯ ೪ ಆಣೆ

1700
ಕರ್ಣಾಟಕ ಸಾಹಿತ್ಯ ಪರಿಷತ್ತು, BANGALORE, KARNATAKA SAHITYA PARISHAT
ಕರ್ಣಾಟಕ ಸಾಹಿತ್ಯ ಪರಿಷತ್ತು
ಪುಸ್ತಕ ಭಂಡಾರ
ಕ್ರಮ ಸಂಖ್ಯೆ 1700 ವರ್ಗ ಸಂಖ್ಯೆ 66
ತಾರೀಖು
Digitized by ROJA MUTHIAH RESEARCH LIBRARY
ಕನ್ನಡ ಸಾಹಿತ್ಯ ಪರಿಷತ್ತು, ಸರಸ್ವತಿ ಭಂಡಾರ

ಕನ್ನಡ ಸಾಹಿತ್ಯ ಪರಿಷತ್ತು, ಸರಸ್ವತಿ ಭಂಡಾರ,
ಬೆಂಗಳೂರು-೧೮.
A-1700.
NR NI6

EDITED AND PUBLISHED
by
**Srimati Thirumalamma**
at the
Sathee Hithaishini Matru Mandiram,
**NANJANGUD.**

---

**1916**

---

Printed by
B. N. Mutalik-Desai,
at the
Shri Krishna Printing Press,
HUBLI.

---

( *All Rights Reserved* )

ಕನ್ನಡ ಸಾಹಿತ್ಯ ಪರಿಷತ್ತು, ಸರಸ್ವತಿ ಭಂಡಾರ,
ಬೆಂಗಳೂರು-೧೮.

॥ ಶ್ರೀ ॥

॥ ಲಕ್ಷ್ಮೀನೃಸಿಹ್ಮ ಪ್ರಸನ್ನ ॥

# ಸಮರ್ಪಣೆ

---

" ತ್ವದ್ದತ್ತವಾಚಾ ತವಕಿಂಕರೇಣ-ತ್ವತ್ಪ್ರೀತಿ ಕಾಮೇನ
ಮಯಾಕೃತೇನ । ಸ್ತೋತ್ರೇಣ ಲಕ್ಷ್ಮೀ ನೃಹರೇಸ
ವಿಷ್ಣುಃ-ಪ್ರೀತೋ ಭವತ್ವಂ ಕರುಣಾರ್ದ್ರದೃಷ್ಟಿಃ ॥" ೧೭
(ನೃ-ಪ್ರ.)

*

ಯಾವಾತನು ನನ್ನ ಕುಲದೈವವೂ ಇಷ್ಟದೈವವೂ ಆಗಿದ್ದು, ನನ್ನ ಸಾಕಾರಬ್ರಹ್ಮನನ್ನು— ತನ್ನ ನಾಮಾಂಕಿತದಿಂದ ಜನ್ಮವೆತ್ತಿ ಭಕ್ತಾಗ್ರಣಿಯಾಗಿದ್ದವನನ್ನು— ಅತ್ಯಲ್ಪಕಾಲದಲ್ಲಿಯೇ ತನ್ನ ಶ್ರೀಪಾದ ಪದ್ಮಂಗಳಲ್ಲಿ ಭ್ರಮರವನ್ನಾಗಿ ಮಾಡಿಕೊಂಡಿರುವನೋ, ಆ ಪರಮಾತ್ಮನ,—ಪರಮಕೃಪಾಪರಿಪೂರ್ಣನ— ಪ್ರಹ್ಲಾದ ವರದನ—
ಆ ಗಜಾರಣ್ಯಕ್ಷೇತ್ರಾದಿನಾಥನಾಗಿರುವ ಅರ್ಚಾವತಾರನ—
ಶ್ರೀಲಕ್ಷ್ಮೀ ನೃಸಿಹ್ಮಸ್ವಾಮಿನಾಥನ ಚರಣಾರವಿಂದಗಳಲ್ಲಿ
ಈ " ಭದ್ರಗೀತಾವಲೀ " ಪುಷ್ಪಮಂಜರಿಯನ್ನು
ಅನನ್ಯಭಕ್ತಿಭಾವದಿಂದ
ಸಮರ್ಪಿಸಿರುವೆನು.

—*—

( ಮಾಘ ಬಹುಳ ಷಷ್ಠಿ )

ಶಕೆ ೧೮೩೭.

Digitized by ROJA MUTHIAH RESEARCH LIBRARY

...ಸಾಹಿತ್ಯ ಪರಿಷತ್ತು, ಸರಸ್ವತಿ ಭಂಡಾರ

## ಪ್ರಸ್ತಾವನೆ

ಪೂಜ್ಯರಾದ ದೇಶಬಾಂಧವರೇ,

ರತ್ನವು ಯಾವಾಗಲೂ ಪರಿಶುದ್ಧವಷ್ಟೆ; ಒಂದುವೇಳೆ ಅದು ನೀಚನಿಂದ ಮುಟ್ಟಲ್ಪಟ್ಟರೆ ಕೂಡ ಅದರ ಪಾರಿಶುದ್ಧ್ಯಕ್ಕೆ ಹಾನಿತಟ್ಟಲಾರದಲ್ಲವೆ? ಹಾಗೆಯೇ, ಸರ್ವೋತ್ತಮವಾದ ಭಗವನ್ನಾಮವೆಂಬ ಜೀವರತ್ನವು, ಒಬ್ಬ ಅಲ್ಪನ ರಸನೆಯಲ್ಲಿ ಸಿಕ್ಕಿದ ಮಾತ್ರಕ್ಕೆ ಆ ಅಲ್ಪನ ಸ್ಪರ್ಶದಿಂದ ಆ ಜೀವರತ್ನಕ್ಕೆ ಯಾವ ಹಾನಿಯೂ ತಟ್ಟಲಾರದಲ್ಲವೆ? ಏಕೆಂದರೆ, ಅದು ಎಂದೆಂದೂ ನಿರ್ಲಿಪ್ತ-ನಿರ್ವಿಕಲ್ಪ, ನಿತ್ಯತೃಪ್ತ, ನಿಷ್ಕಲಂಕ, ನಿರಂಜನ ಇತ್ಯಾದಿ ಅನಂತನಾಮನ ಅಪಾರ ಮಹಿಮೆಯನ್ನೊಳಕೊಂಡು, ಸ್ವಪ್ರಕಾಶತ್ವದಿಂದ ತನ್ನನ್ನು ಧರಿಸಿದ ಆ ಅಲ್ಪನ ರಸನೆಗೂ ಅಷ್ಟಷ್ಟಾಗಿ ಪ್ರಕಾಶವನ್ನುಂಟುಮಾಡುವಂತಹದು. ಎಂದ ಬಳಿಕೆ ಇಂದಿನ ನನ್ನೀ ಕೃತಿಯಿಂದ ಆ ಪರಮಾತ್ಮನಿಗಾದ ಕೊರತೆಯೇನು?

ಆದರೆ, ಯತಿ, ಗಣ, ನಿಯಮ, ಪ್ರಾಸ, ಛಂದಸ್ಸು ಮೊದಲಾದ ಕವಿ ಸಮಯಗಳನ್ನು ಚೆನ್ನಾಗಿ ತಿಳಿದು, ಶಬ್ದಾಲಂಕಾರ—ಅರ್ಥಾಲಂಕಾರಗಳಿಂದ ಕವಿತಾಮಾನಿನಿಯನ್ನು ಪರಿಷ್ಕಾರವಾಗಿ ಅಲಂಕರಿಸಿ, ಜಗತ್ತೇ ಮೋಹಿಸುವಂತೆ ಮಾಡಬಲ್ಲ ಕವಿತಾಸಂಪನ್ನರಾದ ಮಹಾರ್ಮಹಾರ್ಗಳ ಮುಂದೆ, ಯಾವದೇ ಒಂದನ್ನೂ ತಿಳಿಯದ ಅಲ್ಪಮತಿಯಾದ ನಾನು, ಹೀಗೆ ಅಸಾಧ್ಯ ಕಾರ್ಯದಲ್ಲಿ ಕೈಚಾಚಿರುವುದು ತಪ್ಪೇ ಸರಿ. ಮಾಡುವುದೇನು? ಎಲ್ಲವೂ ಆ ಭಗವಂತನ ಕಟ್ಟಳೆ!

ಸರ್ವಶಕ್ತನಾದ ಆ ಭಗವಂತನು ನನ್ನಲ್ಲಿ ಕರುಣಿಸಿ, ಯಾವ ರೀತಿಯಲ್ಲಿ ಪ್ರೇರಿಸಿದನೋ—ಆ ರೀತಿಯಲ್ಲಿ, ನನ್ನ ಜಡಭಾವನೆಗೆ ತಕ್ಕಂತೆ— ಅಲ್ಪಬುದ್ಧಿಗೆ ತೋರಿದಂತೆ— ವಿಲಿಖಿಸಿ, ಆತನ ಅನುಗ್ರಹದ ಮತ್ತು ಗುರುಜನರ ಆಶೀರ್ವಾದದ ಬಲದಿಂದ ಇಂದು

ಕನ್ನಡ ಸಾಹಿತ್ಯ ಪರಿಷತ್ತು, ಸರಸ್ವತಿ ಭಂಡಾರ,
ಬೆಂಗಳೂರು-೧೮.

ಇದನ್ನು ನಮ್ಮ ಸೋದರಿಯರ ಕರಕಮಲಗಳನ್ನಲಂಕರಿಸಲೆಂದು ಸಮರ್ಪಿಸಿರುವೆನು. ಸೋದರಿಯರು ಕೂಡ ನನ್ನೀ ಸಮರ್ಪಣೆಯನ್ನು ಉಚಿತವೆಂದೆಣಿಸಿ, ಸ್ವೀಕರಿಸಿ, ತಮ್ಮ ಎಳದಂಗೆಯರ ತಿಳಿವಿಗೂ ತಂದರಾದರೆ, ನನ್ನ ಶ್ರಮಕ್ಕೆ ಫಲವಾಯ್ತೆಂದೇ ಭಾವಿಸಿ ಸಂತೋಷಿಸುವೆನು. ಮತ್ತೇನು ಹೇಳಲಿ? ಅಲ್ಪಮತಿಯ ಆತ್ಮಕೃತಿಯನ್ನು ಆದರಿಸಿ, ತನ್ನೆಳದಂಗೆಯರ ಹೆಂಗರುಳಿಗೆ ಒಲವು ತೋರುವಂತೆ ಮಾಡುವೆನೆಂದು ಭರವಸೆಯನ್ನಿತ್ತು, ತನ್ನ ದೇಶಬಾಂಧವರ ಎಂದರೆ ಹಿತೈಷಿಣೀ ಗ್ರಾಹಕರ ವಿಶ್ವಾಸಗೌರವಕ್ಕೆ ಕಾಣಿಕೆಯಾಗಿ ಒಪ್ಪಿಸಲಿಕ್ಕೆಂದು ಪರಿಷ್ಕರಿಸಿ— ಮುದ್ರಿಸಿ ಪ್ರಕಾಶಪಡಿಸಿದುದಕ್ಕಾಗಿ ಮಾತೃನಂದಿನಿಗೂ ಮತ್ತು ಹಿತೈಷಿಣಿಯ ಮಾತೃಮಂದಿರ ವಾಸಿಗಳಿಗೂ ನನ್ನೀ ಧನ್ಯವಾದಗಳನ್ನು ಸಮರ್ಪಿಸುವುದಲ್ಲದೆ, ಸಹೃದಯದಿಂದ ನನ್ನೀ ಕೃತಿರಚನೆಯಲ್ಲಿ ಸೇರಿದ್ದ ದೋಷಗಳನ್ನು ಯಥೋಚಿತವಾಗಿ ಪರಿಶೋಧಿಸಿ ಕಳುಹಿದ ನಮ್ಮ ಹಿತಚಿಂತಕ ಭ್ರಾತೃ "ಕರ್ಣಾಟಕ ಕವಿರತ್ನ" ರವರ ಮಹೋಪಕಾರವನ್ನು ಯಾವಜ್ಜೀವವೂ ಸ್ಮರಿಸುತ್ತ ಪರಮಾತ್ಮನಲ್ಲಿ ಆ ಭ್ರಾತೃರತ್ನರವರ ಶ್ರೇಯಃಪ್ರಾರ್ಥನೆಯನ್ನು ಮಾಡುವೆನು.

ಮತ್ತೂ ನನ್ನ ಅಜಾಗರೂಕತೆಯ ದೋಷದಿಂದ ಇದರಲ್ಲಿ ಅಡಗಿರುವ ಕೊರತೆಗಳನ್ನು ತಿಳಿಸುವ ಸುಹೃತ್ತುಗಳ ಉಪಕಾರವನ್ನು ಕೃತಜ್ಞತೆಯಿಂದ ಸಂಗ್ರಹಿಸುವೆನೆಂದೂ ಸವಿನಯವಾಗಿ ನಿವೇದಿಸುವೆನು. ಇತಿ—

**ಶ್ರೀಪಾದ ರೇಣು,** ಎಲ್. ಟಿ.

Digitized by ROJA MUTHIAH RESEARCH LIBRARY

ಶ್ರೀ

## ನಂದಿನಿಯ ಪೀಠಿಕೆ

ಸುಹೃದರೇ !

ಈ 'ಭದ್ರಗೀತಾವಲಿ'ಯೂ ಮತ್ತು ಇದರೊಡನೆ 'ಆನಂದಗೀತೆ' ಎಂಬ ಗೀತಾಪುಸ್ತಕವೂ ಮುದ್ರಣ-ಪ್ರಚಾರಣಗಳಿಗೆಂದು ಮಾತೃಮಂದಿರಕ್ಕೆ ಬಂದು ಇಂದಿಗೆ ಎರಡು ವರ್ಷವಾಗಿರಬಹುದು. ಆದರೂ ಅನೇಕ ಅನನುಕೂಲತೆಗಳಿಂದ ಇಲ್ಲಿಯ ವರೆಗೆ ಹೊರಗೆ ಬರಲವಕಾಶವಿಲ್ಲದೆ ಗುಪ್ತವಾಗಿದ್ದಿತು.

ಆದರೆ ಇಂದಿಗೆ ಮೂರು ವಾರಗಳ ಹಿಂದೆ, ಇದನ್ನು ಈಗಲೇ, ಈ ಮಾತೃನಂದಿನಿಯ ಕಾಣಿಕೆಯಾಗಿ ಪ್ರಚುರಪಡಿಸಲೇಬೇಕೆಂದು ಭಗವತ್ಪ್ರೇರಣೆಯಾದುದರಿಂದ, ಪಂಡಿತರಲ್ಲಿಗೆ ಕಳುಹಿ ಪರಿಶೋಧಿಸಲ್ಪಡುವಂತೆ ಮಾಡಲವಕಾಶವಿಲ್ಲದಷ್ಟು ತ್ವರೆಯಿಂದ ಮುದ್ರಾಲಯಕ್ಕೆ ಹೊರಟುಹೋಗಬೇಕಾಗಿ ಬಂದಿತು. ಹೀಗಾಗಿ ಇದರಲ್ಲಿ ಹಲವು ದೋಷಗಳಿರುವ ಸಂಭವವುಂಟಾಗಿದ್ದರೂ, ಉತ್ಸವಕಾಲಡಲ್ಲಿ ಉಕ್ಕಿನಿಂದ ಸೊಕ್ಕೇರಿ, ದಿಕ್ಕೆಟ್ಟ ನಾಟಕಗಳ ಮಟ್ಟುಗಳನ್ನೆಳೆದು ರಸಾಭಾಸ ಮಾಡುವ ಈ ಕಾಲದ ಕೆಲವು ರಸಿಕಮಹಾಶಯರ ನಡೆವಳಿಗೆ ಖತಿಗೊಂಡು, ಅಂತಹ ಉತ್ಸವಕಾಲದಲ್ಲಿಯೂ ಪರಮಾತ್ಮನ ನಿಂದಾಸ್ತುತಿವರ್ಣನೆ ಮಾಡುವುದು ಲೇಸೆಂದು ಈ 'ಭದ್ರಗೀತೆ'ಯನ್ನು ಇಂದು ನಮ್ಮ ಭಗಿನೀವೃಂದಕ್ಕೆ ಕಾಣಿಕೆಯಾಗಿ ಸಮರ್ಪಿಸಿರುವುದು. ಸಹೃದಯಭಾವನೆಯಿಂದ ಕೈಕೊಂಡು, ಸಾರಾಸಾರ ವಿಚಾರದಿಂದ ಪ್ರೋತ್ಸಾಹಿಸುವರೆಂದು ನಂಬಿ ನಿರೀಕ್ಷಿಸಿರುವುದು. ಇತಿ—

ನಂದಿನಿ.

—

॥ ಶ್ರೀ ॥

॥ ಶ್ರೀಲಕ್ಷ್ಮೀನೃಸಿಂಹ ಪ್ರಸನ್ನ. ॥

# ಭದ್ರಗೀತಾವಲಿ.

" ತ್ವದ್ಭೃತ್ಯಭೃತ್ಯ ಪರಿಚಾರಕ ಭೃತ್ಯಭೃತ್ಯ ಭೃತ್ಯಸ್ಯ ಭೃತ್ಯ ಇತಿ ಮಾಂ ಸ್ಮರ ಲೋಕನಾಥ ।

" ತ್ವದ್ದತ್ತವಾಚಾ ತವಕಿಂಕರೇಣ-ತ್ವತ್ಪ್ರೀತಿ ಕಾಮೇನ ಮಯಾಕೃತೇನ ।
ಸ್ತೋತ್ರೇಣ ಲಕ್ಷ್ಮೀನೃಹರೇಸವಿಷ್ಣುಃ ಪ್ರೀತೋಭವತ್ವಂ ಕರುಣಾದ್ರ್ರ
ದೃಷ್ಟಿಃ " ॥ ೧೭ ॥ (ನೃ-ಪ್ರ.)

—

(ಉರಟಣೆಯಲ್ಲಿ ವಧುವು ವರನನ್ನು ಕುರಿತು ಹೇಳುವುದು)

— ಸೀಸಪದ್ಯ. —

ಜಯಜನಕಜಾಮಾತ । ಜಯಜಾನಕೀಕಾಂತ । ಜಯ ದುರಿತ
ಘನವಾತ । ಮದನ ತಾತ । ಜಲಜಾಪ್ತಸಂಕಾಶ । ವಿಲಸದ್ಗುಣಾ
ವೇಶ । ಲಲಿತ ಸನ್ಮೃದುಭಾಷ । ಪರಮಪುರುಷ ॥ ನತಕಾಮಸುರ
ದ್ರುಮ । ದಿತಿಜಾಬ್ಜಕುಲಸೋಮ । ಕ್ಷಿತಿನಾಥ ರಘುರಾಮ । ಸಮರ
ಭೀಮ ॥ ಪಿತೃವಾಕ್ಯಪರಿಪಾಲ । ಸತ್ಯವ್ರತ ಸುಶೀಲ । ಮೃತ್ಯುಂಜಯ
ವಿನುತ । ಮಹಿತ ಚರಿತ ॥ = ॥ ಭವಭಯಾಂಬುಧಿ ತರಣ । ಭಕ್ತ
ಭರಣ । ಪವನ ನಂದನ ಸೇವ್ಯ । ದೇವದೇವ । ಸುವಿಮಲ ಯಶ
ಶ್ಚಂದ್ರ ರಾಮಚಂದ್ರ । ಪರಿಪಾಹಿ ಶ್ರೀಶೇಷ ಗಿರಿವಿಭೂಷ ॥ ೧ ॥

ಪಿ

ಸಖಿಯೆ ಲಾಲಿಸು ಎನ್ನ। ಸಖನ ವರ್ಣಿಪೆ ಮುನ್ನ । ಸುಖದಾತ
ಸುಂದರನ ಪ್ರಾಣಸಖನ ॥ ಜಲಜಸಂಭವನಂದು । ಜಡನಾಗಿ ತಾ
ನಿಂದು । ಕಡುದೈನ್ಯದಿಂದೆರೆಯ-ಲೊಡನೆ ಬಂದು ॥ ವೇದಗಳ್ಳನು
ಪೋದ । ಹಾದಿಯನೆ ತಾ ಪಿಡಿದು । ವಾರ್ಧಿಯೊಳ್ಮುಳುಗಿ ಸನ್ಮೋ

Digitized by ROJA MUTHIAH RESEARCH LIBRARY

ದದಿಂದ ॥ ಕ್ರೋಧಿರಕ್ಕಸನುರವ । ಭೇದಿಸುತೆ ವೇದವ । ನ್ನಾದರಿಸಿ
ತಂದೀಯುತ್ತಜಗೆನಲವಿಂ ॥ = ॥ ನಿರ್ಮಾಣ ಕಾರ್ಯದೊಳ್ ನಿಯ
ಮಿಸಿದನಾ । ಸ್ವರ್ಣಗರ್ಭನ ನಂತು ಮೀನನಾಗಿ । ಅರ್ಣವದಿ ನೆಲೆ
ಯಾಗಿ ನಿಂತ ಸುಗುಣ । ಘನ್ನಶೇಷಾದ್ರೀಶ-ನೆನ್ನರಮಣ ॥ ೨ ॥

೩

ಸರಸಿಜಾಯತನೇತ್ರ । ಸರಿಯಾರೆ ಧರೆಯೊಳಗೆ । ಪರಮಕಾರು
ಣಿಕನೆನ್ನೆರೆಯನಿವಗೆ ॥ ಸುರರು ದಾನವರಂದು । ಶರಧಿಮಥನವಮಾಡೆ ।
ಗಿರಿಯು ಭಾರವ ವಹಿಸೆ । ಮೊರೆಯನಿಡಲು ॥ ಪೇರ್ಮೆಯಿಂ ವೈ
ದೊರಿ, ಕೂರ್ಮಾವತಾರದಿಂ । ಭಾರವನು ವಹಿಸಿದಾ-ಧೀರವರನು ॥
ಆಪದವ ಪರಿಹರಿಸಿ । ಕಾಪಿಡೆಂದೊರಲುವರ । ಕೈಪಿಡಿದು ಕಾಪಾಡು
ವಾಪ್ತಬಂಧು ॥ ವಂದಾರು ಮಂದಾರನಮರವಿನುತ । ಇಂದಿರಾರಮ
ಣನರವಿಂದನಯನ ॥ ಬೃಂದಾರಕಾರಾತಿ ಗರ್ವಭಂಗ । ಕಂದರ್ಪ
ಜನಕ ಶೇ-ಷಾದ್ರಿನಾಥ ॥ ೩ ॥

೪

ಆದಿವರಾಹನೇ ಆದಿತ್ಯಸನ್ನಿಭನೆ । ಆದ್ಯಂತರಹಿತನೆ ಸತ್ವಮಯ
ನೆ ॥ ಭವರೋಗಶಿಕ್ಷಣಾ ಸಕ್ತನಾರಾಯಣ । ಭೂರಮಣ ಭಯಹರ
ಣ । ಕಲಿತಸುಗುಣ ॥ ಧೀರ ದುರಿತವಿದೂರ । ಸಾರ ಜಗದಾಧಾರ ।
ವಾರಾಶಿಜಾಗಾರ । ವೇದಸಾರ ॥ ಕನಕಾಕ್ಷ ಮದಶಿಕ್ಷ । ಅನಿಮಿಷಾ
ಧಿಪ ಪಕ್ಷ । ದಾನವಾಳಿವಿಪಕ್ಷ ಶರಣರಕ್ಷ ॥ = ॥ ಪರಮಪೂರುಷನಿತ್ಯ-
ನಿರ್ವಿಕಲ್ಪ । ಸರಸಿಜಾಯತನೇತ್ರ ವಜ್ರಗಾತ್ರ ॥ ವರಶೇಷ ಗಿರಿವಾಸ
ವೆಂಕಟೇಶ । ಪರಿಪಾಹಿ ಮಾರಮಣ ದಿವ್ಯಚರಣ ॥ ೪ ॥

೫

ಹಿರಣ್ಯಕಶ್ಯಪವೈರಿ । ಮುರದಾನವವಿದಾರಿ । ದುರಿತರೋಗ ನಿ
ವಾರಿ । ಪಾಹಿ ನೃಹರಿ ॥ ನಖಮುಖಮಹಾಯುಧ । ಅಖಿಲ ಸಂಪ
ತ್ಪ್ರದ । ನಿಖಿಲ ಲೋಕಾಧೀಶ । ಭಕ್ತಪೋಷ ॥ ನೃಪಂಚಮುಖದೇವ ।
ಸುಪವಿತ್ರ ಶ್ರೀಧವ । ಕೃಪಾರ್ಣವ ಕೇಶವ । ಸುಪ್ರಭಾವ ॥ ಘೋರ
ವಿಕ್ರಮರೂಪ-ವೈರಿ ಭಂಜನಕೋಪ । ಸಾರ ಸುಗುಣಕಲಾಪ । ವಿಜಿತ



ತಾಪ ॥ = ॥ ವೇದ ವೇದ್ಯಸುಭದ್ರ-ತರಳವರದ । ಸಾಧುಸಮ್ಮತ
ಚರಿತ ಸಿದ್ಧಿದಾತ । ಕ್ಷುದ್ರದೈತ್ಯವಿನಾಶ । ಚಿದ್ವಿಲಾಸ । ಭದ್ರಶೇಷಾ
ದ್ರೀಶ-ಶ್ರೀನಿವಾಸ ॥ ೫ ॥

೬

ವರವಾಮನಾಕಾರ । ಪರಮಕರುಣಾಸಾರ । ಶರಣಜನಮಂದಾರ ।
ಭಯವಿದೂರ ॥ ಶತಯಾಗ ಸಹಜಾತ-ದಿತಿಜಾಳಿ ಘನವಾತ । ಶತ
ಪತ್ರದಳನೇತ್ರ ॥ ನುತಸುಗಾತ್ರ ॥ ಕಶ್ಯಪಾತ್ಮಜಯೋಗ-ವಶ್ಯ ಸದ್ಗುಣ
ಭೂಷ । ಕೇಶಿನಾಶನ ದಿವ್ಯವೇಷಭಾಷ ॥ ವೇದಗೋಚರ ನಿತ್ಯ-ಮೋ
ದದಾಯಕ ನಮಿತ । ಮಾಧುರ್ಯವಾಗ್ವಿಹಿತ । ಭೇದರಹಿತ ॥ = ॥
ಅನಂತ ಕಲ್ಯಾಣ ಗುಣಾಪ್ರಮೇಯ । ಸನಕಾದಿ ಮುನಿನಿಕರ ವಂದ್ಯ
ಚರಣ । ವನಜಾಕ್ಷ ಶ್ರೀಶೈಲಶಿಖರಧಾಮ । ಮನೋಮೋಹನಾಂಗ ಪರಿ
ಪಾಹಿರಂಗ ॥ ೬ ॥

೭

ನಕ್ತಂಚರವಿದಾರಿ । ಭಕ್ತವತ್ಸಲಶೌರಿ । ವ್ಯಕ್ತಾವ್ಯಕ್ತನಮೋ-
ವಿಶ್ವಕರ್ತ ॥ ಪಾಹಿತ್ರೈವಿಕ್ರಮ । ಪರಮಪಾವನನಾಮ । ಅಹಿತ
ಸಂಕುಲ ಭೀಮ । ಪೂರ್ಣಕಾಮ ॥ ಬಲಿಮಂದಿರದ್ವಾರ-ತಲನಿಲಯ
ಶ್ರೀಧರ । ಜಲಧಿಸಮ ಗಂಭೀರ । ವರದ ಧೀರ ॥ ಪಾಕಶಾಸನಪಕ್ಷ ।
ನಾಕಾರಿ ಕುಲಶಿಕ್ಷ । ಶ್ರೀಕಲಾಂಕಿತವಕ್ಷ । ಶರಣರಕ್ಷ ॥ = ॥ ಪಂಕ
ಜಾಸನ ಪೂಜಿತಾಂಘ್ರಿಯುಗಳ । ಪಂಕಜೇಕ್ಷಣ ಪಾಹಿ ಪದ್ಮನಾಭ ।
ಓಂಕಾರ ರೂಪ ಶ್ರೀ ಶೈಲಧಾಮ । ಕಿಂಕರಾಭರಣ ಭೋ ಭದ್ರ
ಧಾಮ ॥ ೭ ॥

೮

ಭೃಗುವಂಶಸಂಭೂತ- ಜಗತ್ರಯ ವಿಖ್ಯಾತ । ಅಘದೂರ ಪರ
ಶುಧರ । ದ್ವಿಜಕುಮಾರ ॥ ಭೂಭಾರ ಪರಿಹಾರ । ಭಕ್ತಜನಮಂದಾರ ।
ಭೂಭುಜ ತರುಕುಠಾರ । ಧೈರ್ಯಸಾರ ॥ ರುಚಿಕನಂದನ ಬಾಲ ।
ಶೌಚ ಸತ್ಯಸುಶೀಲ । ದ್ವಿಜಸಂಘ ಪರಿಪಾಲ-ದಾನಲೋಲ ॥ ಸಹಸ್ರ
ಭುಜ ವಿದಾರ-ಅಹಿತಜನ ಮದಹರ । ವಿಹಿತ ಪಥ ಸಂಚಾರ-ಪಾಹಿ

Digitized by ROJA MUTHIAH RESEARCH LIBRARY

ಸುಕರ ॥ = ॥ ಕೃಪಾರ್ಣವ ಭಾರ್ಗವ-ಸುಪ್ರಭಾವ । ಕೋಪಜಿತ ಭೂಪಾಲ ದೇವದೇವ ॥ ತಾಪಹರ ಶೇಷಾದ್ರಿ ನಿಲಯ ಸದಯ । ಶ್ರೀ ಪರಂಧಾಮ ಸ-ತ್ಕೀರ್ತಿ ಕಾಮ ॥ ೮ ॥

೯

ನೀಲನೀರದಶ್ಯಾಮ-ಫಾಲಾಕ್ಷನುತನಾಮ । ಪಾಹಿಮಾಂ ಶ್ರೀ-ರಾಮ । ಗುಣನಿಕಾಮ ॥ ಸರಸಿಜಾಸನವಿನುತ । ಸರಸ ಕರುಣಾ ಭರಿತ । ಪರಮಪಾವನ ಚರಿತ । ಪುಣ್ಯಗಾತ್ರ ॥ ಭಾರ್ಗವ ಮದಾಪಹ- ಭುವನ ಮೋಹಕ ದೇಹ । ಸ್ವರ್ಗನಿಲಯಾಧಾರ- ಸತ್ವಸಾರ ॥ ಇನಕುಲಾರ್ಣವ ಸೋಮ । ತ್ರಿನಯನ ಮನಃ ಪ್ರೇಮ । ಜನನಿಲಯ ಸುವಿರಾಮ । ದಿವ್ಯನಾಮ ॥ = ॥ ಪಾಕಾರಿಹಿತಪರಂಧಾಮರಾಮ । ಸಾಕೇತಪುರಧಾಮ- ಸಮರ ಭೀಮ ॥ ರಾಕೇಂದು ನಿಭವದನ-ದುರಿತ ದಮನ । ಶ್ರೀಕಾಂತ ಶೇಷಾದ್ರಿ ನಿಲಯ ಸದಯ ॥ ೯ ॥

೧೦

ಗೋವರ್ಧನೋದ್ಧಾರ-ಗೋಪಿಕಾಜನಜಾರ । ದೇವಕೀ ಸುಕುಮಾರ । ಸೂಕ್ತಿಕಾರ ॥ ರುಕ್ಮಿಣೀ ಮನೋಹರ-ರುಕ್ಮಗರ್ವನಿವಾರ । ಚಕ್ರಧರ ಶ್ರೀರಂಗ । ಶ್ಯಾಮಲಾಂಗ ॥ ಪಾಂಡುಸುತಸನ್ಮಿತ್ರ-ಪಾಂಡವ್ಯ ಸನ್ನುತಾ । ಖಂಡಲಾರ್ಚನಪಾತ್ರ-ನುತಚರಿತ್ರ ॥ ದ್ವಾರಕಾಪುರಿವಾಸ । ಧರ್ಮರಕ್ಷಣದೀಕ್ಷ । ವೈರಿಶಿಕ್ಷಣದಕ್ಷ । ಶ್ರೀಕಟಾಕ್ಷ ॥ = ॥ ದ್ರೌಪದೀ ಮಾನದಾ- ಪಾಹಿ ವರದ । ತಾಪತ್ರಯ ಹರಣ ಭಕ್ತ್ಯಧೀನ । ಆಪನ್ನಿವಾರಣಾ-ಮೋಘ ವಚನ । ಭೋ, ಪರಂಧಾಮ ಶ್ರೀ ಶೈಲಧಾಮ ॥ ೧೦ ॥

೧೧

ಮಾನಿನೀ ವ್ರತಹರಣ । ದೀನರಕ್ಷಣ ನಿಪುಣ । ದಾನವ ಕುಲಾಹನನ । ವಸನಹೀನ ॥ ತ್ರಿಪುರಾರಿ ವಂದಿತ । ತಪ್ತಹೇಮಸುಗಾತ್ರ । ಅಪರಿಮಿತ ಶಕ್ತಿಯುತ- ವೇದವಿದಿತ ॥ ಮೃತ್ಯುಭಯ ವಿರಹಿತ । ನಿತ್ಯ ನಿಷ್ಕಲ್ಮಷ । ಸತ್ವಮಯ ಸ್ವರೂಪ । ಬುದ್ಧರೂಪ ॥ ಆನಂದ ಪರಿಪೂರ್ಣ । ಅಬ್ಜಪತ್ರೇಕ್ಷಣ । ಆದ್ಯಂತಕಾರಣ ಅಪಾರಮಹಿಮ ॥ = ॥

Digitized by ROJA MUTHIAH RESEARCH LIBRARY



ಭೂತದಯಾಪರ-ಧರ್ಮಸಾರ । ಪೂತ ಸದ್ಗುಣಲಸಿತ ದುರಿತದೂರ ॥ ಧಾತ, ಸುಕವಿಜನ ಚೈತನ್ಯದಾತ । ಖ್ಯಾತಶೇಷಾದ್ರಿವರ—ಪಾಹಿ ಸುಕರ ॥ ೧೧ ॥

೧೨

ಜಲಜಾಪ್ತ ಸಂಕಾಶ । ಕಲಿತ ಸನ್ಮೃದುಭಾಷ । ಕಲಿಕಲುಷ ವಿಧ್ವಂಸ । ಪರಮಹಂಸ ॥ ಶರಣಜನ ಸಂರಕ್ಷ । ಸುರವಿರೋಧಿ ವಿಪಕ್ಷ । ಧರ್ಮರಕ್ಷಣ ದೀಕ್ಷ । ಲಸಿತ ವಕ್ಷ ॥ ಸರಸಿಜಾಯತನಯನ । ಶರದಿಂದು ನಿಭವದನ । ದುರುಳ ಮ್ಲೇಂಛ ವಿಹನನ । ತುರಗವದನ ॥ ಧುರಧೀರ ಶ್ರುತಿಸಾರ । ಸುರುಚಿರಾಂಗದ ಹೀರ-ವರಹಾರ ಕಂಧರ, ಭವವಿದೂರ ॥ = ॥ ಕಮಲಾಸನಾದಿಸಂ-ಸೇವ್ಯಮಾನ । ಅಮರಸಂಕುಲತೋಷ ದಿವ್ಯವೇಷ ॥ ವಿಮಲ ಶೇಷಾದ್ರೀಶ ಶ್ರೀನಿವಾಸ । ಮಮ ದೇವ ಪಾಹಿ ಪರ ವಾಸುದೇವ ॥ ೧೨ ॥

೧೩

ಸಾಗರಸ್ಥಿತನಿಲಯ । ಭೋಗೀಶ ಕೃತಶಯ್ಯ । ವಾಗೀಶಸಂಸೇವ್ಯ । ಭಜಕಭಾವ್ಯ ॥ ಮುನಿಮನೋಂಬುಜ ಭೃಂಗ । ಘನನೀಲ ಮೃದುಲಾಂಗ । ಅನಘ ಕರುಣಾಪಾಂಗ । ಪಾಹಿರಂಗ ॥ ಆದಿನಾರಾಯಣಾ । ಆನಂದ ಪರಿಪೂರ್ಣ । ಆಶ್ರಿತ ಪರಿಪಾಲನ । ಅಬ್ಜನಯನ ॥ ಸುರವಿರೋಧಿಕೃತಾಂತ । ಸುರರಾಜನಂದಿತ । ಧರಣೀ ಸುರಾರ್ಚಿತ, ದಿವ್ಯಚರಿತ ॥ = ॥ ಕ್ಷೀರಾಬ್ಧಿ ಜಾರಮಣ-ದೇವದೇವ । ಮಾರಾರಿ ವಿನುತಾದ್ಭುತಪ್ರಭಾವ । ಸ್ಮರತಾತ ಸ್ಥಿತಿಕರ್ತ ನಿತ್ಯವಿಭವ । ವರ ಶೇಷ ಗಿರಿವಾಸ-ಶ್ರೀನಿವಾಸ ॥ ೧೩ ॥

೧೪

ಕಾಮಾರಿನುತನಾಮ । ಶ್ಯಾಮಸುಗುಣಾರಾಮ । ಕಾಮಿತ ಸುರದ್ರುಮ । ಕೀರ್ತಿಕಾಮ ॥ ಅಜನೃಪಾತ್ಮಜ ಬಾಲ-ರಜನೀಚರಕಾಲ । ರಜನೀಕರಸುಫಾಲ-ಸತ್ಯಶೀಲ ॥ ಪಾದಾಪ ಹೃತಶಾಪ । ಪರಮಪಾಹನರೂಪ । ಪದ್ಮಾಪ್ತ ಕುಲದೀಪ । ವಿಶ್ವರೂಪ ॥ ವಾರಿಜೋದ್ಭವ ತಾತ । ವಾರಿಜಾಯತನೇತ್ರ । ವಾರಿಜಾಪ್ತಜ ಮಿತ್ರ-ಘನಚರಿತ್ರ ॥ = ॥

ಪರಮಕರುಣಾಪೂರ ಸತ್ವಸಾರ ॥ ಧರಣಿಜಾ ಮನೋಹರ-ಸಮರ ಶೂರ ॥ ಶರಣಜನರಕ್ಷ ಶ್ರೀವತ್ಸವಕ್ಷ ॥ ವರಶೇಷಗಿರಿವಾಸ ಪಾಹಿ ಶ್ರೀಶ ॥ ೧೪ ॥

೧೫

ಕ್ಷೀರಾಬ್ಧಿಜಾರಮಣ । ಕ್ಷೀರಾಂಬುನಿಧಿಶಯನ । ಶ್ರೀರಮಾಮಣಿ ಸದನ । ಗರುಡಗಮನ ॥ ಕಾಕುತ್ಸ್ಥವಂಶಾಬ್ಧಿ-ರಾಕೇಂದು ಗುಣನಿಧೀ । ಪಾಕಾರಿಮುಖದೇವ-ನಿಕರಜೀವ ॥ ನಿಟಿಲಾಕ್ಷನುತನಾಮ । ಜಟಾವಲ್ಕಲಧಾಮ । ತಾಟಕಾಂತಕರಾಮ-ಸಮರಭೀಮ ॥ ಇಂದುಸನ್ನಿಭವದನ । ಕುಂದಕುಟ್ಮಲರದನ । ಇಂದೀವರ ಸುನಯನ । ಕನಕವಸನ ॥ = ॥ ಕವಿಜನಮನೋಲ್ಲಾಸ-ಶಶಿಸುಹಾಸ । ಪವನನಂದನ ಸೇವ್ಯ-ದೇವದೇವ ॥ ಭವಭೀತಿ ಹರಶೇಷ ಶೈಲ ನಿಲಯ, ಸುವಿಮಲ ಯಶಶ್ಚಂದ್ರ-ರಾಘವೇಂದ್ರ ॥ ೧೫ ॥

೧೬

ಅಕ್ಷವಿದ್ಯಾನಿಪುಣ । ಅಕ್ಷಯಾತ್ಮಕ ಸುಗುಣ । ಅಕ್ಷಯತರ ಸುವಚನ ಲಸಿತ ವದನ ॥ ದ್ಯೂತೋದ್ಯೋಗರತ । ಖ್ಯಾತಸುಗುಣೋಪೇತ । ದೈತ್ಯಸಂಕುಲಘಾತ । ಪ್ರಾಣನಾಥ ॥ ನರಸೂತ ಸಚ್ಚರಿತ । ವರದಾತ ವಿಖ್ಯಾತ । ಸುರಸಿದ್ಧ ಸಂಪ್ರೀತ । ಮಾರತಾತ ॥ ಗೋಪಾಲ ಕುಲರತ್ನದೀಪ, ಗೋಕುಲ ಶರಣ । ಗೋಪಿಕಾ ಜನಮನನ-ತಾಪಶಮನ ॥ = ॥ ಲೀಲಾವಿಭೂತಿಯುಗನಿರತ ಸುಹಿತ । ನೀಲಾಂಬರಾವರಜ-ರಾಜರಾಜ । ಕಾಲಾಂಬುದಾಕಾರ ಖಲಕುಠಾರ-ಪಾಹಿಮಾಂ ಶ್ರೀಶೇಷ ಗಿರಿವಿಲೋಲ ॥ ೧೬ ॥

೧೭ (ವರನಿಗೆ ವೀಳ್ಯವೊಪ್ಪಿಸುವುದು.)

ಮಂದರೋದ್ಧಾರ ಮುಚು-ಕುಂದವರದ ಮುಕುಂದ । ಇಂದಿರಾನಂದಗೋ-ವಿಂದವರದ ॥ ಕಂದನತಿ ದೈನ್ಯದಿಂ । ತಂದೆ ಬಾರೆನ್ನಲಾ, ನಂದದಿಂ ಸ್ತಂಭದಿಂ ಬಂದೆ ಭರದಿಂ ॥ ನಂದಾತ್ಮ ಸಂಜಾತನೆಂದೆನಿಸಿ ನಲವಿನಿಂ-ಬೃಂದಾವನದಿ ನಿಂದೆ-ವರದನೆಂದೆ ॥ ಅಂದಂತು

ಕನ್ನಡ ಸಾಹಿತ್ಯ ಪರಿಷತ್ತು ... ೧೮.
Digitized by ROJA MUTHIAH RESEARCH LIBRARY



ಪಾಂಚಾಲಿ ಗಂಧದಿಂ ದಕ್ಷಯಾ-ನಂದಮಂ ಕೃಪೆಗೆಯ್ದುದರರೆ ಪಿರಿದು ॥ = ॥ ಅಚ್ಯುತಾನಂತ ಚಿದ್ರೂಪ ವಿಭವ । ಪಚ್ಚಕರ್ಪೂರದಿಂ ಮಿಳಿತಮಾಗಿ ॥ ಪೆರ್ಚೆಪರಿಮಳವೀಳ್ಯಮಿದನುಕೊಂಡು । ಮೆಚ್ಚಿ ಪೊರೆಯೆನ್ನ-ಶೇಷಾದ್ರಿರನ್ನ ॥ ೧೭ ॥

೧೮ (ಮಾಲೆಯನ್ನಳವಡಿಸುವುದು)

ಮಣಿಹಾರವಂ ತೊರೆದು । ದನುಜೇಶನಾಕರುಳ । ನಣಿಯುರದಿ ಧರಿಸಿರ್ಪ । ನನಘನಿವಗೆ ॥ ವರರತ್ನಹಾರವಂ । ಹರಿಸದಿಂದಳವಡಿಪೆ । ನರಹರಿಯ ಕಂಧರಂ । ಮೆರೆಯಲರರೆ ॥ ಜಪಸರವ ನಾಂತೆಸೆವ । ಸುಪವಿತ್ರಗಿಂದಿಡುವೆ । ವಿಪುಲ ಮುಕ್ತಾಸರವ ನುಪಮೆವಿೂರೆ ॥ ಕಮನೀಯಗಾತ್ರಂಗೆ । ರಮಣೀಯ ಶ್ಯಾಮಲಗೆ । ಕಮಲಮಾಲೆಯನಲಂಕರಿಪೆನಿಂದು ॥ = ॥ ಧುರಧೀರನಂ ವೀರ ಶೌರ್ಯನಿಧಿಯ । ಧರಣೀಸುರಾಳಿ ಸಮ್ಮೋದಕರನ ॥ ಶರಣಾಗತರಕ್ಷನ ನಮಿತಬಲನ । ವರಶೇಷಗಿರೀಶನಂ ನಮಿಪೆನಿನ್ನು ॥ ೧೮ ॥

೧೯ (ಆರತಿಯೆತ್ತುವುದು)

ನಗಮಂ ನಖಾಗ್ರದಿಂ । ನೆಗಪಿ ಸಮ್ಮೋದದಿಂ । ಜಗಕೆ ಚಿತ್ರವತೋರ್ದ ಜಗದಧೀಶ ॥ ಗಾರಡಿಗತನದಿಂದ, ಭೂರಿಸಂಭ್ರಮವಾಂತು । ಕ್ರೂರಫಣಿಗರ್ವಮಂ ಭಂಗಗೈದು ॥ ಶಿಶುರೂಪದಿಂದಮೆ-ನಿಶಿಚರರ ಸದೆವಡೆದ । ವಸುದೇವನಂದನಗೆ ವಿಶ್ವಪಿತಗೆ ॥ ಅಣುರೇಣು ತೃಣಕಾಷ್ಟ । ಪೂರ್ಣನಾಗಿರುತಿರ್ಪ-ಪ್ರಾಣಕಾಂತಗೆ ನಾನು । ಮಣಿವೆಮುನ್ನ ॥ = ॥ ಮುತ್ತಿನಾರತಿಯೆತ್ತಿ ನಲಿಪೆನಿಂದು, ಸತ್ಯವಿಕ್ರಮನನ್ನು ಸಾರಿಬಂದು । ಭಕ್ತಿಭಾವದಿ ನಮಿಪೆ ನುತಿಸಿಮನದಿ । ಕರ್ತೃಶೇಷಗಿರೀಶ-ನೆನುಪೆ ಮುದದಿ ॥ ೧೯ ॥

೨೦

ನಾರಗಾ ಎನುತಂದು । ಸಾರಲಾನುಡಿಕೇಳಿ । ಆರಯ್ದು ಕಯ್ವಿಡಿದು ಕಾದೆದ್ವಿಜನ ॥ ಗೋವಿಂದ ಪೊರೆಯೆಂದು ಗೋಳಿಟ್ಟಗಜರಾಜ-ಗಾದಿವ್ಯದರ್ಶನಾ-ನಂದಮಾಯ್ತು ॥ ಅಕ್ಷಯನೆ ಕಾಪಿಡೆಂ-ದಾಕ್ಷಣವೆ

ಕನ್ನಡ ಸಾಹಿತ್ಯ ಪರಿಷತ್ತು, ಸರಸ್ವತಿ ಭಂಡಾರ

ಪಾಂಚಾಲಿ-ಗಕ್ಷಯಾಂಬರಗಳಿಂ । ರಕ್ಷೆಯಾಯ್ತು ॥ ಪಾರ್ಥಸೂತನೆ ನಿನ್ನನರ್ಥಿಯಿಂ ಕೆಲಸಾರ್ದು-ಪ್ರಾರ್ಥಿಸುತ್ತಿರ್ಪನ್ನೈ । ಪರಮಪುರುಷ ॥ = ॥ ವರಶೇಷಗಿರಿನಿಲಯ ಸುಗುಣವಲಯ । ಶರದಿಂದು ನಿಭವದನ ಚತುರವಚನ ॥ ಸುರವೈರಿಕುಲದಮನ ಗರುಡಗಮನ । ಪರಿಪಾಹಿ ಮಮದೇವ ಸುಪ್ರಭಾವ ॥ ೨೦ ॥

೨೧

ಶರಣಜನಮಂದಾರ । ಮುರದಾನವವಿದಾರ । ಕರವಿಡಿದು ಕಾಪಿಡೈ । ಕಮಲನಾಭ ॥ ಧರೆಯೊಳಾರಿರ್ಪರ್ಕೈ । ಪರಮಸತ್ಯಾತ್ಮರೀ । ಪರಿಯ ನೋಡಲು ನಿನಗೆ । ಸರಿಯನರಿಯೆ ॥ ಮೂರಡಿಯ ನೆವದಿ ನೀ-ನಾರಯ್ದು ಭೂಮಿಯಂ । ಧಾರಾವಿಧಿಯಿನಿತ್ತ ದೈತ್ಯವರನ ॥ ಶಿರಮೆಟ್ಟಿ ಪಾತಾಳ-ಕುಹರದೊಳ್ ಸೆರೆವಿಡಿದು, ಪರಮ ಜಾಗರದಿಂದ ಕಾಪುಗುಡುವೈ ॥ = ॥ ಕರಿರಾಜವರದ ಲಕ್ಷ್ಮೀವಿನೋದ । ಕರುಣಾಳು ನೀನೆಂದು ತಿಳಿದೆ ಮನದೆ । ಭರದಿಂದ ವೈದೋರು ಮುದವಬೀರು । ವರಶೇಷ ಗಿರಿನಿಲಯ ಸುಗುಣವಲಯ ॥ ೨೧ ॥

೨೨ (ನಿಂದಾಸ್ತುತಿ)

ಕುಲಕೆತಕ್ಕಸ್ವರೂಪ । ಚಲುವಿಗೊಪ್ಪುವವಿದ್ಯೆ । ಕಲೆಗೆ ಸಲ್ಲುವ ಸುಗುಣ । ಭಳಿರೆ ನಿಪುಣ ॥ ಕಿರುಕುಳದೆ ಕೈನೀಡಿ । ಕರೆಕರೆಯ ತಂದೊಡ್ಡಿ । ಹರಿಸವಾನುವನೋಡಿ ವರನಗಾಡಿ ॥ ಜೂಜುಗಾರರಿಗೆರೆಯ ಮೋಜಿನೋಳ್ ಸಮನರಿಯ । ಸೋಜಿಗಂಮಿಗೆತೋರ್ಕು-ಮಿನಿತು ಸೊರ್ಕು ॥ ನಿಶಿಚರಾಂತಕನೆನುವ । ಪೆಸರಾಂತುಮಿಾತೆರದ । ವಿಷಮವರ್ತನದಿ ಸಂ-ತಸವಪಡುವ ॥ = ॥ ಪರಿಯಿದಚ್ಚರಿಯಾಗಿ ತೋರ್ಕುಮೆನಗೆ । ಪರಿಪರಿಯ ಚಿಂತೆಗಾಕರಮಿದಾಗೆ । ಉರಿಯುತಿಹುದೀಬಗೆಯೊಡಲಬೇಗೆ । ವರಶೇಷಗಿರೀಶನೇ ಶರಣನೆನಗೆ ॥ ೨೨ ॥

೨೩

ಅನಘಸಂಪದನೆಂದು । ಮನದೊಳಗೆ ನಲಿದಿಂತು । ಜನಕನಿತ್ತನು ಎನ್ನ-ನಿನಯುಗಂದು ॥ ದಾನಕ್ಕೆ ಕೈನೀಡಿ, ದಾನಮಂ ತಾಂ ಬೇಡಿ । ದಾನಿಯಂ ಪಾತಾಳ-ಕೀಡು ಮಾಡಿ ॥ ಮಾನಾಭಿಮಾನಮಿಂ-ತೇನೇನುಮಿಲ್ಲದೆಯೆ । ದಾನವನ ಮನೆಗಾವ । ನೇನ ಪೇಳ್ವೆ ॥ ತಿರುಕ ಹಾರುವನಿವಗೆ । ಅರಸಿಯಾನಾದೆನೇ । ಮರುಗಲ್ಕೆ ಫಲವೇನೊ ಅರಿಯೆ ನಿನ್ನ ॥ = ॥ ಸಟೆನುಡಿಯಿನೆಲ್ಲರಂ ಮರುಳುಗೊಳಿಪ । ಕುಟಿಲಗಾರನದೆಂತು ಸುಖವಪಡಿಪ ॥ ಚಟುಲಮತಿಯೆನ್ನಭೀಷ್ಟವನು ಸಲಿಪ । ಸಟೆಯಲ್ಲವೆನ್ನೆರೆಯ ಶೇಷಗಿರಿಪ ॥ ೨೩ ॥



೨೪

ಚಲುವನಿವನೆಂದೆನುತೆ । ಪಲತೆರದೆ ಬಣ್ಣಿಸುತೆ । ನಲಿದಿತ್ತಹಲುಗಿರಿಯುಗೆನ್ನತಾತ ॥ ಕೆಂಗಣ್ಣಕಿಡಿರೋಷ-ಸಿಂಗದಾಮುಖಭಾವ । ಭಂಗಿಯನು ಕುಡಿದವೋಲ್ ಕಂಡುಬರುವ ॥ ರುಧಿರಪಾನವಮಾಡಿ । ಅಧರವಿದು ಕೆಂಪಾಗಿ । ವಿಧವಿಧದಿ ಝೃಂಭಿಸುತೆ ವಧಿಸೆಬರುವ ॥ ವರರತ್ನಹಾರವನು । ತೊರೆದು ರಕ್ಕಸನುರವ । ಕರಳಿದಂ ಧರಿಸಿಂತು । ಮೆರೆವನಕಟ ॥ = ॥ ಘೋರವದನನೆ ಎನಗೆ ನೀರನಾಗೆ । ಹಾರಮಳವಡಿಸಿದೆನೆ ಕುಪಿತಗಿವಗೆ । ಸಾರೆ ಫಲವೇನಿನ್ನು ನಡೆದೆಬೇಗೆ । ಧೀರಶೇಷಗಿರೀಶನೊಡೆಯನೆನಗೆ ॥ ೨೪ ॥

೨೫

ಅತ್ರಿಯಣುಗನು ಮತ್ತೆ । ಸತ್ಯಾತ್ಮನಿವನೆನುತೆ । ಚಿತ್ತದೊಳು ನೆರೆನಂಬಿ ಪತ್ನಿಯಾದೆ ॥ ಪಲಜನರನೆರೆಬೇಡಿ, ಪಲಜನರನುರೆಕಾಡಿ । ಪಲವು ಸತಿಯರ ಕೂಡಿ-ದಿವನಗಾಡಿ ॥ ಅರಿತು ಪೇಳುವರುಂಟೆ ಸರಸಿಯಿವನೆಂದೆನುತೆ, ನೆರೆದು ಜೀವಿಪರುಂಟೆ । ಅರರೆ ತಂಟೆ ॥ ಮೋಸಗಾರರೊಳಗ-ಗ್ರೇಸರನು ಈ ವರನು । ವಾಸುದೇವನು ಬಂಧು ದ್ವೇಷಿಯಿವನು ॥ = ॥ ಸ್ತ್ರೀಯರನದಾವಗಮದೆನಿತೊ ಜರೆವ । ಮಾಯೆಯಿಂದವರೊಡನೆ ಕೂಡಿಮೆರೆವ ॥ ಬಾಯೊಳಗೆ ಸುಬ್ರಹ್ಮಜ್ಞಾನವೊರೆವ-ಜೀಯ ಶೇಷಗಿರೀಶನೆಂದು ನಲಿವ ॥ ೨೫ ॥

೨೬

ಮಾತಿನೊಳು ಕಡುಜಾಣ । ನೀತಿಯೆಂಬುದಕಾಣ । ಪ್ರೀತಿಯಿಲ್ಲದ ಪ್ರಾಣ-ನಾಥನಮ್ಮ ॥ ಕಪಿಜನಗಳೊಡನಾಡಿ । ಚಪಲಚಿತ್ತನು ಮಾದ ಕೃಪೆಯಿಲ್ಲವೆಳ್ಳೆನಿತು ಕೃಪಣನಕಟ ॥ ಸ್ತ್ರೀಹತ್ಯ ನರಹತ್ಯ

Digitized by ROJA MUTHIAH RESEARCH LIBRARY

ಪ್ರಾಣಹತ್ಯವಗೈದ ಸಾಹಸಿಯುದೇನೆಂಬೆ ಘನನಿತಂಬೆ ॥ ಪಕ್ಷಪಾತಿಗಳೊಳಗೆ । ಈಕ್ಷಿಸಲ್ ಧರೆಯೊಳಗೆ –ದಕ್ಷನೀತಗೆಸರಿಯೆ— ಪೇಳೆ ಸಖಿಯೆ ॥ = ॥ ಶರವೊಂದು ನುಡಿಯೊಂದರಿಂದ ನಲಿವ । ತಿರುಕ ಹಾರುವರೊಡನೆ ಚರಿಸುತಿರುವ । ಪರಮಸಾತ್ವಿಕಮೂರ್ತಿಯೆಂದು ನುಡಿವ । ವರಶೇಷ ಗಿರಿವಾಸ ನೆನ್ನದೇವ ॥ ೨೬ ॥

೨೭

ದೃಢಚಿತ್ತದೊಳಗೆನ್ನ ಒಡೆಯನೀತಗೆ ಮುನ್ನ । ಪಡಿಯೆನಿಪರಿನ್ನುಂಟೆ, ಪೊಡವಿಯಲ್ಲಿ ॥ ಜನವಾರ್ತೆಯನೆ ಕೇಳಿ ವನಿತೆಯೊಳು ಖತಿತಾಳಿ । ಇನಿತುಕಾಡಿದ ಚಾಳಿ-ಯೊರೆವೆಕೇಳಿ ॥ ಮಡಿವಳನ ನುಡಿಗಾಗಿ । ಕಡುಮೂರ್ಖತಾನಾಗಿ । ಅಡವಿಗಟ್ಟುವರೇನೆ ಮಡದಿಯನ್ನೆ॥ ಧರ್ಮಪತ್ನಿಯುಮಂತು ಪೂರ್ಣಗರ್ಭವನಾಂತ ಅರ್ಧಾಂಗಿಯನ್ನುಳಿದ ನಿರ್ದಯಾತ್ಮ ॥ = ॥ದಯೆಯೆಂಬುದಿವನಲ್ಲಿ ತೋರದಿಲ್ಲಿ। ಪ್ರಿಯರಾರು ಮತ್ತಿವಗೆ ಧಾತ್ರಿಯಲ್ಲಿ । ಭಯವಿಲ್ಲ ಮಾತಿನೊಳು ಸಯುವದಿಲ್ಲ । ಜಯಶೇಷ ಗಿರಿವಾಸನೆನ್ನನಲ್ಲ ॥ ೨೭ ॥

೨೮

ಹೆತ್ತವರಿಗೆರವಾಗಿ । ಹೆರವರಿಗೆ ಮಗನಾಗಿ । ಚಿತ್ತದೊಳು ನಲಿವವನೆ, ಮತ್ತನಿವನೆ ॥ ತುಂಟತನದೊಳಗೆ ಸರಿ-ಯುಂಟೆ ಈತಗೆ ಜಗದಿ । ನಂಟರನು ಗೋಳಿಡುವ ತುಂಟನಿವನೆ ॥ ವಂಚಕರಿಗೆಲ್ಲರಿಗೆ ಸಂಚಕಾರವಕೊಡುವ । ಚಂಚಲಾಕ್ಷಿಯರನ್ನೆ ವಂಚಿಸಿರುವ ॥ ಮಾನವರೊಳಿಂತಪ್ಪ । ಮಾನಿಯಂ ನಾನರಿಯೆ । ಮೀನಾಂಕಸಮರದೊಳ್ ಜಾಣನಿವನೆ ॥ = ॥ ಜಾರರೊಳ್ ಕಡುಶೂರ । ಮಾಯಕಾರ । ಚೋರತನದೊಳು ವೀರ ಭಯವಿದೂರ ॥ ದಾರಿಕಾಯಲುಧೀರ ಧೈರ್ಯಸಾರ ಮಾರಪಿತ ಶೇಷಗಿರಿ ವರನೆನೀರ ॥ ೨೮ ॥

೨೯

ಜನಕನೇನೆನುತೆನ್ನ ಘನವಂತನಿವನೆಂದು । ಮನದಂದು ಬಳಿಸಂದು ಕೊಟ್ಟನಿಂದು ॥ ವೇಷವನು ನೋಡಿದೊಡೆ । ಋಷಿಯುಂಪಮಾಗಿಹುದೆ । ಭಾಷೆಯಿಂ ಭಾವೆಯೊಲು ಭಾಸಮಹುದೆ ॥ ಚರ್ಯೆಯಿಂ

Digitized by ROJA MUTHIAH RESEARCH LIBRARY



ಭೂಭುಜನ-ಪರ್ಯಾಯದಿಂದಿಹನೆ । ಸಾರ್ವಭೌಮನುಮಹನೆ ವೀರ್ಯದಲ್ಲಿ॥ ವನವಾಸಿಯುಂತಿವಗೆ ಧನುರ್ವಿದ್ಯಾ-ಪವಣೇನು । ವನಿತೆಯನು ಸಂತವಿಸ-ಲರಿಯದವನು ॥ = ॥ ಹೇಸದಾ ಸ್ತ್ರೀಭುಕ್ತ ಶೇಷವುಂಡು । ಬೇಸರದೆ ವನಮೂಲ ಫಲವ ತಿಂದು ॥ ವಾಸಿಪಂಥದೊಳಾನೆ ಶೂರನೆಂದು । ಘೋಷಿಸುವ ಶೇಷಗಿರಿವಾಸನೆಂದು ॥ ೨೯ ॥

೩೦

ನುಡಿಯಲ್ಲಿ ರಸತೋರೆ । ಉಡಿಯೊಳಗೆ ವಿಷವಿರೆ । ನಡೆಯಲ್ಲಿ ವಕ್ರಮುರೆ-ನೋಡಲರರೆ ॥ ಅನೃತೋಕ್ತಿಯುಂತಿವಗೆ ಅಮೃತಾನ್ನದಂತಾಗೆ । ಸೂನೃತದಿ ಚಿತ್ತಮಿಗೆ ಬಹುದು ಹೇಗೆ ॥ ನಗಧರಗೆ ಸತಿಯಾದೆ । ಹಗರಣಕ್ಕೀಡಾದೆ । ನಗೆಗೇಡಿಗೊಳಗಾದೆ ಜಗದಮುಂದೆ ॥ ಪರರ ಬಿನ್ನಣದ ನುಡಿ- ಗೆರಕವಾಗಿರೆ ಕಿವಿಯು । ಪರಿಯದೇಂ ವರ್ಣಿಸುವೆ-ನರಿಯೆನಮ್ಮ ॥ = ॥ ಕೋಟಿಜನ್ಮದಿನೋಂತ ಪುಣ್ಯಫಲದಿ । ಬೂಟಕವ ತೋರುವನ ಪಡೆದೆ ಮುದದಿ ॥ ನಾಟಕಪ್ರಿಯನಿಂದೆ ಸುಖಿಪ ಬಗೆಗೆ । ಸಾಟಿಯುಂಟೆ ಶೇಷಗಿರೀಶನಿವಗೆ ॥ ೩೦ ॥

೩೧

ಕೋಪದೊಳು ಜಮದಗ್ನಿ, ತಾಪದೊಳು ಮಾರ್ತಾಂಡ । ಭೂಪರೊಳು ರಘುನಾಥ-ನೆನ್ನನಾಥ ॥ ದ್ವೇಷದೊಳು ಭಾರ್ಗವನು, ರೋಷದೊಳು ದೂರ್ವಾಸ । ಪೋಸದೊಳ್ ಶ್ರೀಕೃಷ್ಣ—ನರರೆ ಕೃಷ್ಣ ॥ ಭೋಗದೊಳು ದೇವೇಶ, ರಾಗದೊಳು ಗಿರಿಜೇಶ । ತ್ಯಾಗದೊಳು ಶಿಬಿರಾಯ-ಮದನಕಾಯ ॥ ಜ್ಞಾನದೊಳು ಜನಕನು, ಧ್ಯಾನದಲಿ ದತ್ತರ್ಷಿ । ಸೂನೃತದಿ ಹರಿಶ್ಚಂದ್ರ ಮಾನನಿಧಿಯು ॥ = ॥ ಧನಿಕನೆನ ಲಷ್ಟ ಸಿದ್ಧಿದಾತನಿವನೆ । ಗುಣವಂತನೆನೆ ಪ್ರಣವರೂಪನಿವನೆ ॥ ಧಣಿಯೆನಲು ಮೂಜಗ-ಕ್ಕೊಡೆಯನಹನೆ ಎಣೆಯುಂಟೆ ಶೇಷಾದ್ರಿವಾಸನಿವಗೆ॥ ೩೧ ॥

೩೨

ಪ್ರಾಣೇಶನೆನ್ನೊಳಗೆ ಕೇಣನಾಂತಿಹನೇಕೆ । ಗೋಣಬಿಗಿವಂತಾಗೆ ನಾಣದೇಕೆ ॥ ಇಲ್ಲದುದನಿವನೊಳಾಂ । ಸೊಲ್ಲಿಸಿದೆನೇನಮ್ಮ । ಕಲ್ಲೆ

ದೆಯಿದೇವೆಳ್ವೆನಲ್ಲನಿವಗೆ ॥ ಕಂಡಪುದ್ದಿಯ ಪೇಳೆ । ಕೇಂಡದಂತಾಗು ವರೆ । ಕಂಡುದಿಲ್ಲಕ್ಕಟೀ-ಭಂಡತನವ ॥ ನ್ಯಾಯವನು ಸೂಚಿಸಲು ನೋಯುವಂತಾಡುವರೆ ।ಜಾಯೆಯೊಳಗೀತೆರದನ್ಯಾಯಮರರೆ ॥ = ॥ ಕಪಟನಾಟಕಸೂತ್ರಧಾರನಿವನೆ । ಸುಪವಿತ್ರಕೇಳೆನ್ನ ಪ್ರಾಣಸಖನೆ ॥ ತಪನವಂಶಾಬ್ಧಿರಾಕೇಂದುವಿವನೆ । ವಿಪುಲ ಶೇಷಾದ್ರೀಶ-ನೆನಿಪ ವರನೆ ॥ ೩೨ ॥

೩೩

ಮೌನವೇಂ ಪ್ರಾಣೇಶ, ಎನ್ನೊಳೀಪರಿರೋಷ । ಮಿನ್ನೇತಕೀ ದ್ವೇಷ–ಜೀವಿತೇಶ ॥ ಅನ್ಯಾಯಮೇಂಗೈದೆ, ನಿನ್ನನಾನೇನೆಂದೆ । ನಿನ್ನ ಚರ್ಯೆಯನೊರೆದೆ–ನಿನ್ನ ಮುಂದೆ ॥ ಇಷ್ಟುಮಾತ್ರದಿನೆನ್ನ ದಿಟ್ಟನದೆ ನೀಂಘನ್ನ ಸಿಟ್ಟನಿಂ ಕುಳ್ಳಿಹುದೆ ಧಿಟ್ಟತನದೆ ॥ ಕರುಣಾಳು ನೀಕೇಳು ತರುಣಿನಾನಿನ್ನವಳು । ಪರರ ಭಾವಿಸಲೊಲ್ಲೆ ನೀನೆ ಬಲ್ಲೆ ॥ = ॥ ಇನ್ನಾದೊಡೀ ಪಂಥವುಳಿದು ದಯದಿ । ಕಣ್ದೆರೆದು ನೋಡಿನ್ನು ಮನ್ನಿಸೆನ್ನ ॥ ನಿನ್ನುಳಿದು ಕಾಣೆನಾನನ್ಯರನ್ನು । ಘನ್ನ ಶೇಷಾದ್ರೀಶ-ಸಹುದು ನೀನು ॥ ೩೩ ॥

೩೪ (ವೀಳ್ಯವೊಪ್ಪಿಸುವುದು)

ಹೃದಯೇಶ ನಿನ್ನಂತೆ । ಸದಯನಿನ್ನಿಹರೇನು । ವಿಧುಸನ್ನಿಭಾನನಾ ಪದ್ಮನಯನ ॥ ಶ್ಯಾಮಲಾಂಗನೆ ಎನ್ನ ಕಾಮಿತಮಿದೆಲ್ಲಮಂ । ಪ್ರೇಮದಿಂ ಪಾಲಿಸೈ, ಕ್ಷೇಮ ಧಾಮ ॥ ಏಲಾಲವಂಗದಿಂ ಬಾಲ್ಮೆಣಸುಪತ್ರೆಯಿಂ । ಮೇಲೆನಿಸಿ ಘುಮಘುಮಿಪ ವೀಳ್ಯಮಿದನು ॥ ಮೆಚ್ಚಿ ನೀಡುವೆನಾನು ನಚ್ಚಿನಿಂ ಕೊಂಡಿದನು । ಅಚ್ಯುತನೆ ನೀನಿನ್ನು ರಕ್ಷಿಸೆನ್ನ ॥ = ॥ ರನ್ನದಚ್ಚೆಯ ಪಿಡಿದು ನಿಂದು ನಿಂದು । ಖಿನ್ನತೆಯನಾಂತೆನ್ನ ಕರವು ನೊಂದು ॥ ದಿನ್ನಾದೊಡೆನ್ನ ಕಣ್ದೆರೆದು ನೋಡು । ಚನ್ನ ಶೇಷಾದ್ರೀಶ ಕರವನೀಡು ॥ ೩೪ ॥

೩೫ (ಆರತಿಯೆತ್ತುವುದು)

ರಾಗ— (ಚಲ್ಲಿರೆ ಮಲ್ಲಿಗೆಯ)

ಬೆಳಗುವೆನಾರತಿಯಂ ನಾಂ ॥ ಪ ॥

ನಳಿನಾಕ್ಷ ರಂಗಗೆ ನಲವಿಂದ ಪಾಡುತೆ ॥ ಅನು ॥



ಕನಕಪಾತ್ರೆಯೊಳು । ಘನಮುತ್ತುರತ್ನಂಗಳು । ಮಿನುಮಿನುಗುತ್ತಿರಲು ಮನಮಂತುಬ್ಬೇರಲು ॥ ಬೆಳಗುವೆ ॥ ೧ ॥

ನವಭಕ್ತಿಯೋಗಂಗಳಿಂ । ನವಭಾವ ಪಾತ್ರಂಗಳಿಂ । ನವನೀತ ಚೋರಗಾ ನಮಿಸುತ್ತೆ ನೇಹದಿಂ ॥ ಬೆಳಗುವೆ ॥ ೨ ॥

ವರಶೇಷ ಶೈಲೇಶಗೆ । ಶರಣಾಗತ ಸಂರಕ್ಷಗೆ । ಕರಿರಾಜವರದಗೆ ಸುರರಾಜವಂದ್ಯಗೆ ॥ ಬೆಳಗುವೆ ॥ ೩ ॥

೩೬ (ಉರಟಣೆಯ ಹಾಡು)

ರಾಗ— (ಜಯಜಯಸನ್ನುತಕಾಯ)

ಜಯಜಯ ನಾರಸನಯನ । ಜಯಜಯ ವಾರಿಧಿಶಯನ ।
ಜಯಜಯ ಲಕ್ಷ್ಮೀರಮಣ । ಜಯ ಭಕ್ತಾಭರಣ ॥ ಪ ॥

ಸ್ಮರತಾತಾ-ಶ್ರೀಕಾಂತ । ವರದಾತಾ-ರಘುನಾಥ । ವರಕಪೋಲವ ತಾರೈ, ಅರಿಸಿನ ಹಚ್ಚುವೆನು ॥ ಜಯ ॥ ೧ ॥ ಹರಧನುಖಂಡನ ಶೌರಿ । ಸುರರಿಪುಸಂಕುಲ ವೈರಿ । ಕರಪಲ್ಲವತೋರೈ, ಅರಿಸಿನ ಪೂಸುವೆನು ॥ ಜಯ ॥ ೨ ॥ ಪಾದಾಪ ಹೃತಶಾಪ । ಪರಮಪಾವನರೂಪ । ಪಾದಪದ್ಮವತಾರೈ, ಪೂಜಿಪೆ ನಾನೊಲವಿಂ ॥ ಜಯ ॥ ೩ ॥ ಖಲದೈತ್ಯ ಕುಲ ಕಾಲ । ಬಾಲೇಂದು ನಿಭಫಾಲ । ಸ್ಥಲದೊಳುಮಿಗೆ ಪೊಳೆವ । ತಿಲಕವ ತಿದ್ದುವೆನು ॥ ಜಯ ॥ ೪ ॥ ಶಂಭುಸನ್ನುತನಾಮ । ಜಂಭಾರಿನುತರಾಮ । ಕಂಬುಕಂಧರತೋರೈ, ಗಂಧವ ಹಚ್ಚುವೆನು ॥ ಜಯ ॥ ೫ ॥ ಕಮನೀಯ ಮೃದುಲಾಂಗ । ಕಮಲಾಕ್ಷ ಶ್ರೀರಂಗ । ರಮಣನೆ ನಾನಳವಡಿಪೆಂ, ಕಮಲಮಾಲಿಕೆಯ ॥ ಜಯ ॥ ೬ ॥ ವರಶೇಷಾ-ಚಲವಾಸ । ಶರದಿಂದು ನಿಭಹಾಸ । ಕವಿಜನ ಮಾನಸಹಂಸ । ತರಣಿಕುಲಾವತಂಸ ॥ ಜಯ ॥ ೭ ॥

೩೭ (ಚಂಡಾಡುವುದು)

ರಾಗ— (ನಾರೀಮಣಿ ನಿಲ್ಲಾ ರಮಣಿ)

ಪ್ರಾಣಾಧಿಕ ಬಾಬಾ ನಲವಿಂ । ಚಂಡಾಟಕೆ ॥ ಪ ॥

ಶ್ರೀನಾಯಕ ನೀನ್ನೈತರ-ಲಾನಾನತೆ-ಯಾನಂದದಿಂ ॥ ಅನುಪಲ್ಲವಿ ॥

ಬಿಲ್ಲಾಳುಗಳೊಳು ಕಡು ॥ ಬಿಲ್ಲಾಳು ಬಲ್ಲಿದ ನೀಂ । ಫುಲ್ಲಾಸ್ತ್ರನ

Digitized by ROJA MUTHIAH RESEARCH LIBRARY

ನಲ್ಲಗಳೆ ಫುಲ್ಲಸುಮ ಮಾಲೆಯೊಂತು ॥ ಪ್ರಾಣಾಧಿಕ ॥ ೧ ॥

ವಿಕಸಿತ ನಾ ನಾ ವಿಧ ॥ ಸುಕುಮಾರ ಪುಷ್ಪಂಗಳಿಂ । ಸುಖಿಮಿಾವ ಕಂತುಕವಂ । ಸುಕರದಿಂ ದಾಲಿಂಗಿಸಿ ॥ ಪ್ರಾಣಾಧಿಕ ॥ ೨ ॥

ಶೇಷಾಚಲ ಧಾಮಾ ರಮಾ- ವಾಸಾಶ್ರಿತ ಪೋಷಘನ ॥ ಯಾಸಾ ಸರೋಜಾಕ್ಷ ನಿನ್ನ- ದಾಸ್ಯದೊಳೆ ನಿಲ್ಲಿಸೆನ್ನ ॥ ಪ್ರಾಣಾಧಿಕ ॥ ೩ ॥

೩೮ (ವೀಳ್ಯಪೊಪ್ಪಿಸುವುದು)

ರಾಗಾ— (ರಘುಕುಲನಾಯಕಾ)

ಸ್ವೀಕರಿಸೈ ವೀಳ್ಯವಿಾದಸು ಶ್ರೀಕರಾಬ್ಜಪಾಣಿಯಿಂ ॥ ಪ ॥
ಲೋಕನಾಥ ಪಾಲಿಸೆನ್ನ ಶ್ರೀಕಟಾಕ್ಷವೆಂದಲೆ ॥ ಸ್ವೀಕ ॥ಅನು॥

ಪಚ್ಚಕರ್ಪೂರ ಯಾಲ ದಿಂದ ॥ ಹೆಚ್ಚುವಾಸನೆಯುಸುತಳದ, ಅಚ್ಯುತನೆ ವೀಳ್ಯವಿಾದಸು ॥ ಮೆಚ್ಚಿ ನೀಡುತಿರುವೆನು ॥ ಸ್ವೀಕರಿಸೈ ॥ ೧ ॥

ತಟ್ಟೆಯನ್ನು ಪಿಡಿದು ಎನ್ನ, ರಟ್ಟೆಗಳಿವು ನೊಂದವೈ ॥ ಸಿಟ್ಟು ಮಾಡದೀಗ ದಯದಿ । ದಿಟ್ಟನೈ ಮಹೀಶನೇ ॥ ಸ್ವೀಕರಿಸೈ ॥ ೨ ॥

ಲಲಿತಗಾತ್ರ ಎನ್ನೊಳಿಂತು । ಚಲವಿಾದೊಳ್ಳಿತೇನೈ ॥ ಜಲಜನೇತ್ರ ಶೇಷಶೈಲ-ನಿಲಯ ನಿನ್ನ ನಮಿಪೆನೈ ॥ ಸ್ವೀಕರಿಸೈ ॥ ೩ ॥

೩೯ (ಬಾಗಿಲನ್ನು ತಡೆವುದು)

(ಶ್ರೀ ನೆಲಕುನು ಶೃಂಗಾರಮುತೊ)

ಸಾರಸ ನಿಲಯೆ । ಸಾಗರ ತನಯೆ । ಸಾರೆ ಬಂದೆನು ಈಗ—ಬೇಗ—ಸಾರಿ ಬಾಗಿಲ ತೆಗೆ ಬೇಗ ॥ ಪಲ್ಲವಿ ॥

ಸಾರು ಸಾರೆಲೊ ಸಾರೆಕೂಗುವನಾರೊ । ಸಾರು ನಿಲ್ಲದೆ ನೀನು—ಇನ್ನು—ಸಾರು ಬಾಗಿಲ ತೆಗೆನಾನು ॥ ಅನುಪಲ್ಲವಿ ॥

ಏಕಿಂತು ಕೋಪವೆ ಕೋಕಿಲಾರವೆ । ನೀಂ ಕಟಾಕ್ಷಿಸು ಎನ್ನ—ಮುನ್ನ—ಸಾಕುಮಾಡದೆಯೆನ್ನ ॥ ಸಾರಸನಿಲಯೆ ॥ ೧ ॥

ಸಾಕು ಸಾಕಿಂತು ಏಕೆ ಕೂಗುತಿರ್ಪೆ । ಕಾಕಲಾಪವಿದೆಲ್ಲ—ಸಲ್ಲ—ಕಾಕು ನುಡಿಗಳು ಸಲ್ಲ ॥ ಸಾರು ಸಾರೆಲೊ ॥ ೨ ॥

ಪುಂಡರ ತಡೆವುದ ಕಂಡುಂಟು ಜಗದೊಳು । ಗಂಡನ ತಡೆವರೆ ಭಾಮೆ—ರಾಮ—ಕಂಡವರೇನೆಂಬರೆ ಭಾಮ ॥ ಸಾರಸ ॥ ೩ ॥

Digitized by ROJA MUTHIAH RESEARCH LIBRARY



ಗಂಡನಾರಿಗೆ-ಹೆಂಡತಿಯಾರಿಗೆ । ಪುಂಡಾಟವಾಡದೆ ಹೋಗು—ಸಾಗು—ಭಂಡನಾಗಿರ್ಪೆ ಸಾಗು ॥ ಸಾರು ಸಾರೆಲೊ ॥ ೪ ॥

ವಲ್ಲಭೆ ನಿನ್ನೆದೆ ಕಲ್ಲಾಗಿರುವುದೆ । ನಲ್ಲ ನಾನಿನಗಲ್ಲೇ—ನಲ್ಲೆ—ಬಲ್ಲವಳೆಂಬುವುದೆಲ್ಲೆ ॥ ಸಾರಸನಿಲಯೆ ॥ ೫ ॥

ಬಲ್ಲೆ ಬಲ್ಲೆ ನೀ- ಚೆಲ್ಲಾಟಂಗಳ । ಸೊಲ್ಲಿಸುಬಂದಿಹುದೇನು । ಇನ್ನು ಸೊಲ್ಲಿಸದಾರಿನ್ನು ॥ ಸಾರು ಸಾರೆಲೊ ॥ ೬ ॥

ಶಶಿನಿಭವದನೆ, ನಿಶಿಚರದಮನನೆ, ದಶರಥರಾಮನೆ, ಸೀತೆ—ಖ್ಯಾತೆ—ಪುಸಿಯಲ್ಲವೆಲೆ ಭೀತೆ ॥ ಸಾರಸನಿಲಯೆ ॥ ೭ ॥

ದಶರಥನಾದೊಡೆ ದಶೆ ದಶೆ ತಿರುಗೆಲೆ । ನಿಶಿಚರರಿಲ್ಲಿ ಹರೇನೈ—ಜ್ಞಾನಿ—ವಿಷಮವರ್ತನವೇನೈ ॥ ಸಾರು ಸಾರೆಲೊ ॥ ೮ ॥

ಅಂಗನೆ ನಿನ್ನ ಮೋಹನಾಂಗನಾದ ಶ್ರೀ-ರಂಗ ನಾನೆಲೆ ಚಪಲಾಕ್ಷಿ - ಲಕ್ಷ್ಮಿ—ಭಂಗಪಡಿಸಬೇಡೆನ್ನ ಲಕ್ಷ್ಮಿ ॥ ಸಾರಸ ॥ ೯ ॥

ಹಂಗಿಸಬೇಡ ಶು-ಭಾಂಗ ಮನ್ನಿಸೆನ್ನ । ತುಂಗವಿಕ್ರಮ ರಘುರಾಮ—ಶ್ಯಾಮ—ರಂಗ ಕಾರುಣ್ಯಧಾಮ ॥ ೧೦ ॥ ಈಪರಿ ಪೇಳುತೆ ಕೈಪಿಡಿದಳು ತನ್ನೊಲವನ ವಂದಿಸಿ ರಾಣಿ—ರಮಣಿ—ಕೋಪರಹಿತೆ ಸುವಾಣಿ ॥ ೧೧ ॥ ಭೂಪಶೇಷಾದ್ರೀಶನು ಕಾಂತೆಯ—ಕೈಪಿಡಿದನು ನಲವೇರೆ—ಅರರೆ—ತಾಪಸನುತ ನಲವೇರೆ ॥ ೧೨ ॥

೪೦ (ಚೆಂಡಾಡುವುದು)

,, (ಪೊಲಚೆಂಡ್ಲಾಡಿರಿಪ್ಪುಡು)

ಚೆಂಡನಾಡುವ ಬಾರೆಲೈ । ಪ್ರಾಣೇಶ್ವರ ॥ ಪ ॥

ಮಲ್ಲೆ ಜಾಜಿ ಸಂಪಿಗೆ ಮೋಹ್-ವಲ್ಲಿಗೇ ಇರುವಂತಿಗೆ ॥ ಚೆಲ್ವಪಾರಿಜಾತದಿಂದ ಚೆಲ್ವನಾಂತು ಮೆರೆಯುತಿರ್ಪ ॥ ಚೆಂಡನಾ ॥೧॥

ಪರಿಮಳಾನ್ವಿತ ಪಾಟಲೀ—ಸುರಗಿ ಶಾವಂತಿಗೇ— ಸುರಭಿಳಕರವಾಗಿ ಮೆರೆಯೆ ॥ ಸರಸದಿಂದ ನಲಿಯುತಾವು ॥ ಚೆಂಡನಾ ॥ ೨ ॥

ವಿಮಲಶೇಷ ಶೈಲವಾಸ, ಕಮಲಬಾಂಧವ ಸದೃಶಭಾಸ ॥ ಕಮಲನಾಭ ಭಕ್ತಪಾಲ । ರಮಣ ನಿನ್ನ ಕಮಲಪಾಣಿಯಿಂ ॥ ೩ ॥

A 1700

೪೧ (ಬಾಗಿಲನ್ನು ತಡೆವುದು)

ರಾಗ— ಹಿಂದುಸ್ತಾನಿ. (ಕಿದಿರುಜಾತೇಕೋನ)

ಕಲಭಯಾನೆ ಕಂಜಲೋಚನೆ, ಕದವ ತೆಗೆಯೆ ಭಾಮಿನಿ,
ನಾಂ ಬಳಲಿ ಬಂದೆನು ಭಾಮಿನೀ ॥ ಪ ॥

ಬಳಲಿ ಬಂದರೆ ಒಳ್ಳಿತಾಯಿತು ತಳರ್ವುದಿಲ್ಲಿಂ ನಿಲ್ಲದೆ,
ನಾಂ ಕದವ ತೆಗೆಯೆನು ಸಾರೆಲೆ ॥ ಅನು ॥

ಭಾವು ಭಾಪೆಲೆ ಕೋಪಗೈವುದು। ಚಾಪಲಾಂಬಕಿಯೆನ್ನೊಳು,ಆಹ? ಚಾಪಲಾಂಬಕಿಯೆನ್ನೊಳು । ಓಪನಲ್ಲೆ ಕೋಪಸಲ್ಲದೆ ಈ ಪರಿಯೊಳ್ ಪೇಳ್ವುದು, ನೀ—ನೀಪರಿಯೊಳ್ ಪೇಳ್ವುದು ॥ ಕಲಭ ॥ ೧ ॥

ಪಾಪಭೀತಿಯ ನುಳಿದು ಈ ಪರಿ-ಕಪಟನಾಟ್ಯವ ಮಾಳ್ಪರೇ, ನೀಂ ಕಪಟನಾಟ್ಯವ ಮಾಳ್ಪರೇ । ಓಪನೆಂದು ಕೂಗುತಿರುವ-ಭೂಪನಾವನು ಸಾರೆಲೊ, ನಾನೋಪೆಯಾರಿಗೆ ಸಾರೆಲೊ ॥ ಬಳಲಿ ॥ ೨ ॥

ನೀರೆ ಮುಕ್ತಾ ಹಾರೆ ಸ್ಮರಪ್ರೈ ಯ್ಯಾರೆ ಯಿಂತು ಪೇಳ್ವರೇ, (ಪ್ರೈಯಾರೆ ಯಿಂತು ಪೇಳ್ವರೆ) ದಾರಿ ನಡೆದು-ದುಡಿದು ಬಂದೆನು ನೀರಸಾನೆಲೆ ಶ್ರೀಕರೆ, ಕೇಳ್ (ನೀರಸಾನೆಲೆ ಶ್ರೀಕರೆ) ॥ ಕಲಭಯಾನೆ ॥ ೩ ॥

ಚೋರನಂದದಿ ಸಾರಿ ರಾತ್ರಿಯೊಳ್, ದ್ವಾರದೋಳ್‌ನಿಂತು ಕೂಗುವೆ । ನೀಂ ಜಾರನಂದದಿ ಕಾಣುವೆ ॥ ಸಾರೆ ಬಂದಿಹ ಕಾರಣವನು ಸಾರಿಪೇಳು ಕೇಳುವೆ । ನೀನಾರು ಪೇಳು ನೋಡುವೆ ॥ ಬಳಲಿ ॥೪॥

ದೇವಿಕೇಳ್, ವಸುದೇವ-ದೇವಕೀ ಕುಮಾರ ನಾನೆಲೆ ಭಾಮಿನೀ, ಸುಕುಮಾರನಾನೆಲೆ ಭಾಮಿನೀ । ಭಾವಜಾತನ ಬಾಣಕೀಯದೆ ಕಾವುದೆನ್ನನು ಕಾಮಿನೀ, ದಯೆ ತೋರು ಮನೋ-ಮೋಹಿನೀ ॥ ಕಲ॥೫

ದೇವಕೀಸುತನಾದರೊಳ್ಳಿತು ನಾವು ಬಲ್ಲೆವು ಸಾರುನೀಂ, ಗೋವು ಕಾಯ್ದುದ ಬಲ್ಲೆನಾಂ ॥ ಮಾವನನ್ನೆ ಮಥಿಸಿಬಂದ ಮಹಾಮಹಿಮನೆ ಸಾರು ನೀಂ, ಆಹ, ಭಾವಿಸೀ ಭಯಪಡುವೆ ನಾಂ ॥ ಬಳಲಿ ॥ ೬ ॥

ಭೀಷ್ಮಜಾತ್ಮಜೆ ಭೀಷಜಾಂಬಕಿ ಹಾಸ್ಯಮಾಡದೆ ಬೇಗನೆ, ಪರಿಹಾಸ ನಿಲ್ಲಿಸು ಗಮ್ಮನೆ ॥ ಶೇಷಭೂಷಣ ನಮಿತಚರಣೆ । ಸಂತೋಷ

Digitized by ROJA MUTHIAH RESEARCH LIBRARY



ಪಡಿಸುವದೆನ್ನನು, ನಾಂ ಬೇಡಿಕೊಂಬೆನು ನಿನ್ನನು ॥ ೭ ॥ ದೋಷವೆಣಿಸದೆ ಪೋಷಿಪೆನ್ನ—ಮದೀಶ ಹಾಸ್ಯವ ಮಾಡಿದೆ, ಜೀವಿ—ತೇಶ ನಿನ್ನನು ದೂರಿದೆ ॥ ಶೇಷಶೈಲಾವಾಸ ಎನ್ನನು ಪೋಷಿಸೆಂದಳು ವಿನಯದಿ, ಕೈಪಿಡಿದ ದೇವನ ಮೋದದಿ ॥ ಕಲಭಯಾನೆ ॥೮॥ ಜಯಜಗನ್ನಾಥ ಭಕ್ತಾ—ಭಯಪ್ರದ ಶ್ರೀಕರ, ಜಯ ಜಾನಕೀ ಮನೋಹರ ॥ ಜಯಸುರೇಶಸುಪೂಜಿತಾಂಘ್ರಿಯೆ । ಜಯದೇವ ದಯಾಸಾಗರ,ಶೇಷಗಿರೀಶ ಶ್ರೀಧರ ॥ ೯ ॥

---

೪೨ —ಸೀಸಪದ್ಯ—

ವರನಚಂದಮದೇನ । ವರ್ಣಿಸುವೆನೆಲೆಸಖಿಯೆ । ಪರಮಸುಂದರ ಗಾತ್ರ-ನಿರವಕೇಳೆ ॥ ಬಿಚ್ಚಿರುವ ಕಣ್ಗಳ್। ಮುಚ್ಚಲಾರದವರಗೆ । ಪಚ್ಚೆಕರ್ಪೂರದಾ ಕಪ್ಪಿದೇಕೆ ॥ ಕೊಳೆತುನಾರುತಲಿಹಗೆಲಲಿತವ ಸ್ರಾಗಳೇಕೆ । ಹೊಲಸು ಮೆಯ್ಯಿಗೆ ಗಂಧ । ಬಳಿಯಲೇಕೆ ॥ ಜಲಧಿಯಲಿ ಪಾಸಿಪಗೆ, ಫಲವಿಧದ ತೊಡವುಗಳೆ । ನೆಲೆಯಿಲ್ಲದಾತಂಗೆ । ಲಲನೆ ಸುತರೆ ॥ = ॥ ಅಜ್ಞಾತಪಾದಕ್ಕೆ ಗೆಜೆ ಗೊಲಸೆ । ವಿಜ್ಞಾನಮಯಗೆ ವಿವಿಧ ಸಿಂಗರವೆ ॥ ಯಜ್ಞಭೋಕ್ತಗೆ ಮತ್ತೆ ಭಕ್ಷದೆಡೆಯೆ । ಸೂಜ್ಞ ಶೇಷಾದ್ರೀಶ ನರಿಯಲಳವೇ ॥ ೪೨ ॥

೪೩

ವನಜಾಕ್ಷಿ ಕೇಳೆನ್ನ । ಮನದನ್ನ ನಂದವನು । ಮನಸಲಿದು ಪೇಳುವೆನು ಮಹಿಮೆಯನ್ನು ॥ ತುಚ್ಛಮಾಗಿಂತಿರ್ಪ ಕಚ್ಛಸಾಕಾರದೊಳು । ಇಚ್ಛೆಗೊಂಡವಸವನೆ ಮಚ್ಛನಯನೆ ॥ ಹೆಡ್ಡತನದಲಿ ಬಂದು । ದೊಡ್ಡಮಡುವೊಳು ನಿಂದು । ಗುಡ್ಡವನು ಪೊತ್ತಿಹನೆ ದಡ್ಡನಿವನೆ ॥ ಸುರುಚಿರಾಂಗವನಿಂತು ಮರೆಗೈದು ಮುಸುಕಿನಿಂ । ಪರಮಸಂಭ್ರಮವಾಂತು ಮೆರೆಯುತಿಹನೆ ॥ = ॥ ಕ್ಷೋಣಿಯೊಳಗಿಂತಹರ ಕಾಣೆನಿನ್ನು । ಪ್ರಾಣೇಶನಾಗಿನಾಂ-ಪಡೆದೆನಿವನ ॥ ಏಣಾಕ್ಷಿ ನಡೆದುದಿನ್ನಾಡಲೇನು । ಜಾಣ ಶೇಷಾದ್ರೀಶ ನಾಣ್ಮನಹನು ॥ ೪೩ ॥

ಕನ್ನಡ ಸಾಹಿತ್ಯ ಪರಿಷತ್ತು ಸಂಸ್ಕೃತಿ ಭಂಡಾರ

೪೪

ಅಮಮ ಪೇಳುವೆನೇನ । ರಮಣನಾಕೃತಿಯನಾ । ಕಮಲಪತ್ರಾಂಬಕೀ, ಕೇಳು ಸಖೀ ॥ ಹುಳುಕು ಪೋರೆಯ ಮತ್ತೆ । ಕೊಳಕು ದೇಹದ ಕಾಂತ । ಹುಳುಕು ಬೇರನು ಮೆಲುತ । ನಲಿವ ಚಲುವ ॥ ಕೋರೆಯಿದು ಪಡಿಯುದ್ದ । ಮೀರಿಹುದು ತುಟಿಯನ್ನು । ಕ್ರೂರರೂಪವನಾಂತ ಧೀರನಹುದು ॥ ಪುರದಾಚೆ ಸಂಚಾರ । ಮರದಡಿಗಳೊಳೆವಾಸ । ವರಹಗಳೆ ಬಾಂಧವರು । ಪರಮಚಿತ್ರ ॥ = ॥ ಅರರೆ ಬಣ್ಣಿಪೆನೆ ಕಿಟಿರೂಪಧರನ । ಪರಿಯೇನ ಪೇಳ್ವೆನೀ ಕ್ರೂರವರನ । ಗುರುಗಳಾಣತಿಯಿಂದೆ ಪಡೆದೆನಿವನ । ವರಶೇಷಗಿರಿವಾಸ-ನೆಸೆದ ಹದನ ॥ ॥ ೪೪ ॥

೪೫

ಅಬ್ಬಬ್ಬ ಈ ವರನ । ಅದ್ಭುತಾಕೃತಿನೋಡಿ । ಉಬ್ಬಸವು ಮಿಗಿಲಾಯ್ತು ಸಹಿಪೆನೆಂತು ॥ ಕೆಂಗಣ್ಣು ಕೆಮ್ಮೀಸೆ । ಕೆಂಪಾದ ರೋಮಗಳು । ಹೆಮ್ಮಾರಿಯಂದದೊಳು ಮೊರೆವಮಿಗಿಲು ॥ ಕೆನ್ನೀರು ಪಾನದಿಂ-ದುನ್ಮತ್ತನಂದದಿಂ । ಘನ್ನಘಾತಕನಾಗಿ ಮೆರೆವ ಜೀಗಿ ॥ ಕರುಳಮಾಲೆಯ ಧರಿಸಿ । ಮೆರೆಯುತಿಹನೀ ಸಹಸಿ । ತರತರದಿ ಸುರನರರ್ ನಡುಗುತಿಹರು ॥ = ॥ ಸ್ತಂಭವಿದೆ ಜನ್ಮಸ್ಥಲವಾಯಿತಿವಗೆ । ಕುಂಭಿಣೀಯಂಬರಕೆ ಮಧ್ಯದೊಳಗೆ ॥ ಸಂಭ್ರಮದಿ ನೆಲಸಿಹನೆ ಪಡಿಯಮೇಲೆ । ನಂಬಿದೆನು ಶೇಷಗಿರಿವರನಲೀಲೆ ॥ ೪೫ ॥

೪೬

ಏಣಾಕ್ಷಿ ಕೇಳೆನ್ನ । ಪ್ರಾಣೇಶನೀತನಂ । ಬಣ್ಣಿಪೆನದೆಂತುಟೊ ಕಾಣೆನಮ್ಮ ॥ ಕುಟಿಲವೇ ಭೂಷಣವು, ಸಟೆಯಿದುವೆ ಕುಲದೈವ । ವಟುವೇಷಧರನಿವನಹುದು ಚಲುವ ॥ ಕೃಪಣರೊಳಗಗ್ರಣಿಯು । ಕಪಟ ಗುಣಗಳ ಗಣಿಯು । ಕೃಪೆಯೆಂಬುದೆಳ್ಳನಿತು ಕಾಣದವನು ॥ ನುಡಿದ ನುಡಿಯನು ಮತ್ತೆ, ನಡಿಸಲಾರದವರನ । ಪಡೆದೆ ಪೇಳುವೆನೇನ ಸಡೆದ ಬಳಿಕ ॥ = ॥ ಧರಣಿಯೊಳಗಿಂತಪ್ಪ ವರನ ಕಾಣೆ । ತರುಣಿಮಣಿ ಕೇಳೆನ್ನ ಅರಸನಿವನೆ ॥ ತರುಣನೀತನ ಪಡೆದ ಧನ್ಯಳಾನೆ ॥ ವರಶೇಷ-ಗಿರೀಶನೆಬಲ್ಲ ಹದನೆ ॥ ೪೬ ॥

Digitized by ROJA MUTHIAH RESEARCH LIBRARY



೪೭

ನೀರೆ ನೋಡಿವನಾರೆ । ಘೋರರೂಪವ ನಿಾರೆ । ಸಾರೆ ಬಂದಿಹ ನರರೆ, ನಿಲ್ಲಲಾರೆ ॥ ಮುಪ್ಪಾದವುಳ್ಳವನೆ । ಕಪ್ಪುಬಣ್ಣದ ವರನೆ । ಅಪ್ಪನೇಕಿವಗೆನ್ನ-ನೊಪ್ಪಿಸಿದನೆ ॥ ದಾನವನು ತಾಜೀಡಿ, ದಾನಿಯಂ ತುಳಿದಾಡಿ । ನ್ಯೂನತೆಯ ಪೊಂದಿಸಿದ ಜ್ಞಾನಿಯಿವನೆ ॥ ಗಾತ್ರದೊಳಿವನಂತೆ । ಗಾತ್ರಮುಳ್ಳವರಿಲ್ಲ । ಸರ್ವತ್ರ ಬಳಿಸಿ ನಿಂತಿರ್ಪನಿವನೆ ॥ = ॥ ತೃಣದಿ ಶುಕ್ರನ ಕಣ್ಣನಿರಿದ ವರನೆ । ಅಣುರೇಣುತೃಣಕಾಷ್ಟ ಪೂರ್ಣನಿವನೆ ॥ ಪ್ರಣವಪ್ರತಿಪಾದ್ಯನೆನಿಸುವವನೆ ॥ ಫಣಿತಲ್ಪ ಶೇಷಾದ್ರಿವಾಸ ತಾನೆ ॥ ೪೭ ॥

೪೮

ಪ್ರಿಯಸಖಿಯೆ ನೋಡೆನ್ನ, ಪ್ರಿಯನಂದವನು ಮುನ್ನ । ಜಯಶಾಲಿಯೆನಸಿಹನ ಶೌರ್ಯಧುರನ ॥ ಧರ್ಮಪಥವರಿಯದೆಯೆ ಕರ್ಮನಿಷ್ಠಾಪರನೆ । ನಿರ್ಮಲಾನ್ವಯದಲ್ಲಿ ಜನ್ಮಿಸಿದನೆ ॥ ಪೆತ್ತವಳ ಶಿರವನೆ-ಗ್ಗೊತ್ತಿ ಭೂಭುಜಕುಲಕೆ । ಮೃತ್ಯುರೂಪಾದವನೆ, ಮತ್ತನರನೆ ॥ ಘನ್ನಘಾತಕನೆನಿಸಿ । ಕೆನ್ನೀರಕೊಳಸ್ನೈದ । ನನ್ನಿಯಿಂ ನಿರ್ಮಿಸಿದ ಘನ್ನನಿವನೆ ॥ = ॥ ಕಿಡಿಗಣ್ಣ್ಮಲರೆ ಗಂಡುಗೊಡಲಿ ಪಿಡಿದು । ಕಡುಭಯಂಕರನಾಗಿ ಕೃಪೆಯನುಳಿದು ॥ ಸಡಗರದಿ ನಡೆತರುವನಕಟ ಮುಳಿದು । ಒಡೆಯ ಶೇಷಗಿರೀಶನೆನಗೆ ಬಂಧು ॥ ೪೮ ॥

೪೯

ಧುರಧೀರನಿವನೆಂದು । ನೆರೆಪೆರೆಯಲ್ಶೈತಂದು । ಮರುಳಾದೆ ನಾನಿಂದು, ಮುಂದೆ ನಿಂದು ॥ ನಾರ್ವಟ್ಟೆಯುಟ್ಟಿರುವ, ಅರಣ್ಯದೊಳಗಲೆವ । ನಾರುಬೇರನೆ ಮೆಲುವ, ನರರೆ ಚಲುವ ॥ ಜನಪನಂದನನೆನಿಸಿ, ಮುನಿಜನರ ತಾ ಪೆಂಸಿ । ವನವನದಿ ಸಂಚರಿಸು-ತಿರುವ ಸಹಿಸಿ ॥ ಲಲನೆಯನು ಕರೆತರಲು, ಪಲವು ಕಪಿಗಳನೆರೆದು । ಜಲಧಿಯನು ಬಂಧಿಸಿದ-ನಲಘುಬಲನೆ ॥ = ॥ ಇನಿತು ಸಾಹಸವುಳ್ಳ ಸುಗುಣನಿಧಿಗೆ । ಮನವೊಲಿದು ನಾಂ ಬಂದು ಸೋಸಪೋಗೆ । ಮಿಣುಕಿ ಫಲವೇನಿನ್ನು ಮಿಂಚಿದುದಕೆ । ಧಣಿಯೆನಗೆ ಶೇಷಾದ್ರಿವರನೆ ಸಾಕೆ ॥ ೪೯ ॥

೫೦

ಎಂತುಟೆಂದಾಡುವೆನು । ಕಾಂತನಾ ಚರ್ಯೆಯನು । ಸಂತತವು ಚಿಂತಿಪೆನು, ಕಾಂತೆ ನಾನು ॥ ಪಾಲನೂಡಿದಳೆಂತು ಪಾಳುಗೈದವೆನಕಟ । ಬಾಲ ಗೋಕುಲಬಾಲ, ಜಾಲ ಲೋಲ ॥ ಖಲತನದಿ ಗೋಪಿಯರ । ನಿಲಯವನು ಪೊಕ್ಕುತೆ । ನಲಿದು ಪಾಲ್ಬೆಣ್ಣೆಯನು ಕದ್ದು ತಿಂದು ॥ ಪಿಡಿದು ಬಂಧಿಪೆನೆಂದು । ನಡೆತರ್ಪವರಮುಂದು । ಗೊಡದಂದು ಪೈಗರೆದು ಬಡಿವನೆಂದು ॥ = ॥ ಕಾಳಿಯಾ ಮಡುವನ್ನು ಕಲಕಿ ಬಂದು । ಕಾಲಮೇಘವಪೋಲ್ವ ರೂಪತಳೆದು । ಲೀಲೆಯಿಂ ಶೇಷಗಿರಿ ವರದಿ ನಿಂದು । ಜಾಲವನು ತೋರುತಿಹ ದೀನಬಂಧು ॥ ೫೦ ॥

೫೧

ಎಷ್ಟೆನಿಷ್ಟು ಜನ್ಮಗಳ । ಕಷ್ಟಂಗಳನು ತಾಳ್ದು । ನಿಷ್ಠೆಯಿಂ ತಪಗೈಯ್ದು ಶ್ರೇಷ್ಠಫಲದಿ ॥ ದುಡುಕನೀತನಕರವ । ಪಿಡಿದೆ ಪೇಳುವದೇನು । ನಡೆದ ಕಾರ್ಯಕೆ ಮತ್ತೆ ಮಿಡುಕಲೇನು ॥ ಬಟ್ಟೆಗೇ ಗತಿಯಿಲ್ಲ, ಪುಟ್ಟಿದಂತಿಹನಲ್ಲ । ಹುಟ್ಟುನೆಲೆಯರಿತಿಲ್ಲ ಧಿಟ್ಟನಲ್ಲ ॥ ಅಹಿಂಸೆಯೆ ಮರ್ತ್ಯರಿಗೆ। ಸಹಜಧರ್ಮವದೆಂದು । ಬಹುನೀತಿಪೇಳುವನು ಬುದ್ಧನಿವನು ॥ = ॥ ಬೆತ್ತಲೆಯೆ ಮನೆಮನೆಗೆ ಸುತ್ತುತಿಹನೆ। ಉತ್ತಮಾಂಗನೆಯರನು ಕೆಡಿಸೆ ಬಹನೆ ॥ ಚಿತ್ತಬಂದಂತಲೆವ ಮತ್ತನಿವನೆ । ಕರ್ತೃ ಶೇಷಾದ್ರೀಶ ನೆಸೆದ ಹದನೆ ॥ ೫೧ ॥

೫೨

ಏನೆಂದು ಬಣ್ಣಿಪೆನೆ । ಈ ನವ್ಯವಿಗ್ರಹನೆ । ಮನದನ್ನನಾದನೆ। ವನಜನಯನೆ॥ ತೊಳೆದ ಕೆಂಡದ ಕಾಂತಿ, ಮೊಳದುದ್ದ ಮೋರೆಯು । ಕೊಳಗುಳದ ಮನವಿತ್ತು ಮೊಳಗುತಿಹನು ॥ ಕತ್ತಿಯನು ಪಿಡಿದೆತ್ತಿ, ಉತ್ತಮಾಶ್ವವ ಹತ್ತಿ । ಅತ್ಯಂತ ರೋಷದಿಂ ಸುತ್ತುತಿಹನು ॥ ಕೊಲೆಗೆ ಹೇಸದ ನರನೆ, ಪಲಜನರ ಕೆಡಿದವನೆ। ಕಲಿಯಾನೆ ಎನುತಿಹನೆ, ಕಲ್ಕಿಯಿವನೆ ॥ = ॥ ಇಂತಿರುವ ವರಗೆ ಮನಸೋತು ನಾನು । ಕಾಂತನೆಂದಾಡಿದೆನು ಪೇಳ್ವುದೇನು । ಶಾಂತಗುಣ ಶೇಷಾದ್ರಿ ನಿಲಯ ತಾನು । ಸಂತತವು ಭಕ್ತರನು ಪೊರೆಯನೇನು ॥ ೫೨ ॥

Digitized by ROJA MUTHIAH RESEARCH LIBRARY



೫೩

ರಮಣನಾ ವಿಭವವನು, ಅಮಮ ವಿವರಿಪೆ ನಾನು । ಕಮಲಾಕ್ಷಿ ಕೇಳ್ನೀನು ಕ್ರಮದೊಳಿನ್ನು ॥ ತನಯರೊಳು ಜಡನೊರ್ವ-ನನಂಗನೆ ಮತ್ತೊರ್ವ । ವನಿತೆ ಚಂಚಲೆ-ಯಚಲೆಯೆನಿಪರವರು ॥ ವಕ್ರಗಮನೆಯೆ ಸುತೆಯು, ಚಕ್ರವೆ ನಿಜಾಯುಧವು । ಪಕ್ಷಿಯೇ ವಾಹನವು, ದಕ್ಷನಿವನು ॥ ಶರಧಿಯೇ ಮಂದಿರವು, ಉರಗನೇ ಹಾಸಿಗೆಯು । ಇರನನರಿಯರದಾರು, ಬುವಿಯ ಜನರು ॥ = ॥ ಬರಿಯ ಮಾತಿಗೆ ಮನವು ಕರಗಿದುದಕೆ । ಅರಿಯದಾನೈತಂದು ನೆರೆದೆನೇಕೆ। ಪರಿಕಿಸಲ್ ಮತಿಭ್ರಮೆ ಯಿದುವೆ ಸಾಕೆ । ವರಶೇಷಗಿರೀಶನೆ ಸಲಹಬೇಕೆ ॥ ೫೩ ॥

೫೪ (ಆರತಿಯೆತ್ತುವದು)

ರಾಗಾ— ,, (ಬಳೆಯತೊಡಲು ಬಂದೆನು)

ಎತ್ತುವೆನಾರತಿಯ । ರಂಗಧಾಮನಿ ॥ ಗೆತ್ತುವೆನಾರತಿಯ ॥ ಪ ॥ ಗೋಕುಲದೊಳು ಬೆಳೆದು, ಆಕಳನೆಲ್ಲ ಕಾದು । ಪಾಕಶಾಸನನಿಗೆ ಪರಾಕ್ರಮ ತೋರಿದ ಧೀರಗೆ ॥ ಎತ್ತುವೆ ॥ ೧ ॥ ಮಧುರೆಗೆ ನಡೆತಂದು, ಮಾವಕಂಸನಕೊಂದು । ವಾತೆಗೆ ಮುದವಿತ್ತ ಮಧುಸೂದನ ಕೃಷ್ಣಗೆ॥ ಎತ್ತುವೆ ॥ ೨ ॥ ಶೇಷಗಿರಿಯಲ್ಲಿ—ವಾಸವಾಗಿರುತಿರ್ಪ, ಶೇಷಭೂಷಣನುತ ವೃಷ್ಣಿವಂಶೋತ್ತಮಗೆ॥ ಎತ್ತುವೆ ॥ ೩ ॥

೫೫ ರಾಗಾ— ನೋಟ್. (ರಾಮಧೂತನೊ—ಸು—)

ಮುತ್ತಿನಾರತೀ-ತಂದೆತ್ತಿಪಾಡುವೆ । ಚಿತ್ತಜಾತ ಜನಕ ರಂಗನಾಥದೇವಗೆ ॥ ಪ ॥ ಭೂಮಿಪಾಲಗೆ, ಶ್ರೀ-ರಾಮಚಂದ್ರಗೆ । ಕಾಮಿತಾರ್ಥ ದಾತ ಮನೋ ಮೋಹನಾಂಗಗೆ ॥ ಮುತ್ತಿ ॥ ೧ ॥ ಕಾಳಿಮಡುವನು, ಕಲಕಿ ಬಂದಗೆ । ಬಾಲನಾಗಿ ಗೋವುಗಳನು ಕಾದಗೊಲ್ಲಗೆ॥ ಮುತ್ತಿ ॥ ೨ ॥ ಮುರವಿರೋಧಿಗೆ—ಕರುಣವಾರ್ಧಿಗೆ । ತರಳ ಧ್ರುವನಿಗೊಲಿದು ಬಂದ ವರದರಾಜಗೆ ॥ ಮುತ್ತಿ ॥೩॥ ಶರಣರಕ್ಷಗೆ-ಸರಸಿಜಾಕ್ಷಗೆ । ಪರಮ ಪಾವನ ಶೇಷಶೈಲ ಶಿಖರ ಧಾಮಗೆ॥ ಮುತ್ತಿ ॥ ೪ ॥

೫೬ ರಾಗ— ,, (ನರಹರಿ ನಿನಗಾರತೀ–)

ಲಕುಮೀಶ-ನಿನಗಾರತಿ । ಭಕುತಿಯಿಂದೆತ್ತುವೆ । ಸಕಲರ-ಸುಖಕರ ಭಕ್ತರಿಗೊಲಿಯುವ ರುಕ್ಮಿಣಿಯರಸನೆ ॥ಪ॥ ರಮಾಪತಿ ನಿನ್ನನು ನಮಿಸಿ ನುತಿಸುತ್ತಿರ್ಪೆನು । ಕಮಲಾಂಘ್ರಿಯ ಭ್ರಮರವೆಂ—ದಮಲನೆ ಕೈಪಿಡಿ, ರಮಣನೆ ನುಡಿಸುಡಿ ॥ ಲಕು ॥ ೧ ॥ ಇನಕುಲಮಂಡನ ವನರುಹಲೋಚನ । ಜನಕಜಾ-ಸುಪ್ರೇಮನೆ, ಚಿನ್ಮಯರೂಪನೆ, ಮನುಮುನಿ ಸೇವ್ಯನೆ ॥ ಲಕು ॥ ೨ ॥ ಸುರನರ ಪೂಜಿತ, ಸರಸಿಜ ಭವಪಿತ । ಕರುಣಾಕರ-ನರಕೇಸರಿ । ಮರೆಹೊಕ್ಕೆನು ಪೊರೆ, ವರಶೇಷಗಿರಿದೊರೆ ॥ ಲಕು ॥ ೩ ॥

೫೭ (ವರನು ವಧುವಿಗೆ ಹೇಳುವುದು)

ರಮಣಿ ಮಂಜುಳವಾಣಿ, ಕಮನೀಯ ಸುಶ್ರೋಣಿ, ವಿಮಲ ಪಲ್ಲವ ಪಾಣಿ ಫಣಿಪವೇಣಿ ॥ ಏನಾಕ್ಷಿಯೀ ಚಿಂತೆ, ನೀನಾಂತುದೇಂ ಕಾಂತೆ । ಮೌನವೇಂ ಮತಿವಂತೆ, ಬಿರುಸದೆನಿತೆ ॥ ಕುಹಕರುಕ್ತಿಯ ಕೇಳಿ, ಕಡುಕೋಪವನು ತಾಳಿ । ಬಹುವಿಧದಿ ಬಳಲಿಸುವೆ, ವಿಹಿತವೇನೆ ॥ ಹೆಬ್ಬುಲಿಯ ತೆರದಿಂದ, ಬೊಬ್ಬಿರಿದು ಮತಿಯುಳಿದು । ಅಬ್ಬರಿಸಿ ಕೂಗುವರೆ-ಅಬ್ಜನೇತ್ರೆ ॥ = ॥ ಕೈಪಿಡಿದ ರಮಣನೊಳು ಮುನಿಸೆ ತರುಣಿ । ತಾಪಶಮನವಮಾಡು ನೋಡುರಮಣಿ । ಒಪ್ಪನೆಂದೊಲಿದಾಡು ಕರವನೀಡು । ಭೂಪಶೇಷಾದ್ರೀಶನಿತ್ತನೋಡು ॥ ೫೭ ॥

೫೮

ವನಜಗಂಧಿಯೆ ನಿನ್ನ । ಮನದಸಂದೆಗವನ್ನು । ಸನುಮತದಿ ಪೇಳಿನ್ನು ಮುನಿಸಿದೇನು ॥ ಚಾಡಿಮಾತನು ಕೇಳಿ, ರೂಢಿಯಿಂ ಖತಿತಾಳಿ । ಕಾಡುತಿಹುದೇಂ ಚಾಳಿ—ರೌದ್ರಕಾಳಿ ॥ ಸೂಚನೆಯ ಕೊಡದಿಂತು, ವಾಚನದಿ ಬಿರುಸಾಂತು । ರಾಚುತಿರ್ಪೆಯದೇನೆ ನಾಚದಿಂತು ॥ ಮಾನವತಿ ನೀನೆಂದು, ನಾನು ನಂಬಿರಲಿಂದು । ಏನು ಮಾಡಿದೆನೆಂದು ಜರಿವೆ ಬಂದು ॥ = ॥ ಸಾಕು ಸಾಕೀಬಗೆಯ ಕಠಿಣವಾಕ್ಯ । ಕೋಕಿಲಾರವೆ ನಿನ್ನೊಳಿರುವ ಸೊಕ್ಕು । ಸಾಕು ಮಾಡಿಹುದೆನ್ನ, ನೋಡು ಮುನ್ನ । ಲೋಕೇಶ ಶೇಷಾದ್ರಿ ವರದನೆನ್ನ ॥ ೫೮ ॥

Digitized by ROJA MUTHIAH RESEARCH LIBRARY



೫೯ (ವಧುವಿಗೆ ವೀಳ್ಯ ಪೊಪ್ಪಿಸುವುದು)

ಇಂದುಸನ್ನಿಭವದನೆ, ಕುಂದಕುಟ್ಮಲರದನೆ । ಸಿಂಧೂರಸಮಗಮನೆ, ಚತುರವಚನೆ ॥ ಸಿಟ್ಟೇಕೆ ಪೇಳ್ ತರುಣಿ, ದಿಟ್ಟೆ ನೆನ್ನನು ರಮಣಿ । ದಿಟ್ಟೆ ನೀನೆನೆ ರಾಣಿ, ಕೃಷ್ಣವೇಣಿ ॥ ಕಾವಗೀಯದೆಯೆನ್ನ-ಭಾವೆ ಪಾಲಿಸು ಮುನ್ನ । ಭುವಿಜಾತೆ ಮತಿವಂತೆ, ಪ್ರಾಣಕಾಂತೆ ॥ ಚಪಲೆ ನೀನಹುದಲ್ಲ-ಕೃಪಣೆಯೆಂಬುದ ಬಲ್ಲೆ । ವಿಪರೀತವೇಂ ನಲ್ಲೆ, ಸೊಲ್ಲಿಸಲ್ಲೆ ॥ = ॥ ಕ್ಷೀರಸಾಗರ ತನಯೆ, ಸದಯೆ ಜಾಯೆ । ಸಾರೆ ವೀಳ್ಯವನು ಕೈಕೊಂಡು ನೀನು । ಬೀರು ಸಂತಸವನ್ನು ಬೇಡುತಿಹೆನು । ನೀರಶೇಷಾದ್ರೀಶನೊಲಿಯನೇನು ॥ ೫೯ ॥

೬೦

ನೀತಿಯೇನಿದು ಕಾಂತೆ, ಮಾತಿನೊಳ್ ಬಿರುಸೆನಿತೆ, ಘಾತಿಸುವುದಿದೊಳ್ಳಿತೆ, ಪ್ರಾಣದಾತೆ ॥ ಈ ಕಾಲದಬಲೆಯರ, ಕಾಕಲಾಪಕೆ ಸೋತು । ಸಾಕಾರನೊಳಗಿಂತು ಕೋಣಮಾಂತು ॥ ನೀನೆರೆದ ವಸ್ತುಗಳ ನಾನಿತ್ತೆನಾದರೆ । ಕಾನನದ ವಾಸವು ಎನಗೆ ನಿಜವು ॥ ಇದನರಿತು ನೀನೆನ್ನ ಪದುಳದಿಂ ಸುಖಿಯಪ್ಪ । ಹದನನೆಸಗದೆ ಬರಿದೆ ಜರಿದೆ ಮುಗುದೆ ॥ = ॥ ಪ್ರೇಮಗೌರವಭಕ್ತಿಭಾವಶುದ್ಧ ॥ ನೇಮನಿರತಿಶಯ ಸು-ಸ್ನೇಹದಿಂದ । ಕೋಮಲತೆಯನಾಂತೆಸೆವ ಬಗೆಯ ತಾಳ್ವ । ಭಾಮೆಯೆನ್ನಿಸು ಶೇಷಗಿರಿಶ ಗೊಲಿದು ॥ ೬೦ ॥

೬೧

ಭಳಿರೆ ಮೆಚ್ಚಿದೆ ರಮಣಿ, ಒಳಿತು ನಿನ್ನಯ ವಾಣಿ, ಬಲುಹ ತೋರಿದೆ ತರುಣಿ, ಒಲಿದೆ ರಾಣಿ ॥ ಮುಳಿದು ಮೂದಲಿಸುತ್ತೆ, ಹಳಿದು ಹಂಬಲಿಸುತ್ತ, ಗಳಗಳನೆ ಕಣ್ಣೀರ-ನಿಳಿಸುತಳುತೆ ॥ ಕೋರಿದುದ ತಂದೀಯ-ಲಾರದಿಹ ಪುರುಷರಂ । ದೂರುವುದೆ ನಾರಿಯರ ಧರ್ಮವೇನು ॥ ಉಡುವುತೊಡನೇದೆನುತ, ಸಡಗರದಿ ಹಿಗ್ಗುತ್ತ । ಬಡಿವಾರ ತೋರುವುದೆ ನಡೆಯಿದೇಂದು ॥ = ॥ ಸೆಜ್ಜೆ-ಸುಖಶಯ್ಯೆ ಸಿರಿಯಿದನು ನಂಬಿ । ಲಜ್ಜೆಯಿತಿಕರ್ತವ್ಯವದನೆ ಮರೆದು । ದೌರ್ಜನ್ಯಕೀಡಾಗ ಬಹುದೆ ಸಾಧ್ವಿ ॥ ಸಜ್ಜನೆಯೆನಿಸು ಶೇಷ-ಗಿರಿಶನೆಣಿಸು ॥ ೬೧ ॥

೬೨ (ವರನನ್ನು ಹಸೆಗೆ ಕರೆವುದು)

ರಾಗಾ— ,, (ಹಸೆಗೇಳ್ಮೆ ಬಿಸುಜಾಕ್ಷನೆ)

ಬೇಡಿಕೊಂಬೆ ಹಸೆಗೇಳೆಲೈ । ಗಾಡಿಸಂಥ ಮಾಡಬೇಡವೈ ॥ ಪ ॥ ಮಾರುತಿ ಸೇವ್ಯನೆ । ಧೀರದಾತಾರನೆ ॥ ಕೋರಿಭಜಿಪೆ ಬೇಗ । ಬಾರೈ ಸುಂದರ ॥ ಬೇಡಿ ॥ ೧ ॥ ನಾರಿಯುರ್ಕ್ಮಿಣಿಸನು । ಸಾರಿಕರೆವನೈ । ಧಾರಿಣಿಜಾತೇಸಹ॥ ಸಾರಿ ಬಾಬಾಬೇಗ ॥ ೨ ॥ ಭವಭಯದೂರನೆ। ಭಕ್ತ ಮಂದಾರನೆ ॥ ಭಾವಜ ಜನಕನೆ । ದೇವಾದಿದೇವನೆ ॥ ೩ ॥ ಶೇಷ ಗಿರೀಶನೆ । ದಾಸಜನಾಶ್ರಯನೆ ॥ ವಾಸವವಂದಿತನೆ। ವಾಸುದೇವನೆ॥ ಬೇಡಿ ॥ ೪ ॥

೬೩ ರಾಗಾ— (ತಾಮರಸಾಕ್ಷಿಗೆ ಸೋಮುಸಮಾಸ್ಯಗೆ)

ಕ್ಷೀರಾಬ್ಧಿಶಯನನೆ। ಸಾರಸನಯನನೆ। ಕ್ಷೀರಾಬ್ಧಿಜಾವರ ಮೇರು ಗಂಭೀರನೆ ॥ ನೀರಜಭವಪಿತ-ಮಾರಹರಾರ್ಚಿತ । ಚಾರುನೀರದ ಗಾತ್ರ-ಪರಮಪವಿತ್ರ ॥ ಬಾರೆಂದು ಹಸೆಗೆ ಕರೆವೆನು ॥ ಪ ॥ ಧರಣೀ ಸುರರ ಮೊರೆಗಳನಾಲಿಸಿ, ಧರೆಯೊಳಗವತರಿಸಿ, ನರರೂಪಧರಿಸಿ॥ ಧರಣಿಪ ದಶರಥ ತರಳನೆಂದೆನಿಸಿ, ಧರೆಯ ಭಾರವನಿಳಿಸಿ, ಕರುಣಿಸು ಮನವೆರಸಿ ॥ ಬಾರೆಂದು ॥ ೧ ॥ ಶಿಲೆಯಶಾಪವಕಳೆದು, ಲಲನೆಯ ಪೂಜೆಗೊಲಿದು, ಬಲುಹಿನಿಂದಲೆ ಬಂದು, ಹರಧನು ಮುರಿದು ॥ ಬಲ ಗರ್ವಿತ ಭಾರ್ಗವ ಮದಮುರಿದು, ನಳಿನಾಕ್ಷಿಯ ಕೈಪಿಡಿದು, ಸಲ್ಲಹೆನ್ನ ನೀಂ ನಲಿದು ॥ ಬಾರೆಂದು ॥ ೨ ॥ ಈಶವಿನುತ ಶ್ರೀ ಶೇಷಾಚಲ ನಿಲಯನೆ । ದಾಸರಮನದೊಳು ವಾಸನಾಗಿಹನೇ ॥ ವಾಸವಾದ್ಯಮರ ಪೋಷಕನೆನಿಸಿಹನೆ। ಭಾಸುರವದನನೆ, ಶ್ರೀಸತಿಸದನನೇ ॥ ಬಾರೆಂದು ಹಸೆಗೆ ॥ ೩ ॥

೬೪ (ವಧುವನ್ನು ಹಸೆಗೆ ಕರೆವುದು)

ರಾಗಾ— (ರಾಜಿಸುವಳಾರೇ ಈಕೆ)

ಸಾರಸಾಕ್ಷಿ ಬಾಬಾ ಬೇಗ-ಸಾರಿ ನೀಂ ॥ ಪ ॥ ಸಾರಸಾಕ್ಷಿ ಬೇಗ ಚಾರುಪೀಠಕೀಗ ॥ ಅ ॥ ಭೇರಿ ತಮ್ಮಟಾದಿ-ಭಾರಿವಾದ್ಯಗಳೂ। ಭೋ



ರ್ಗರೆಯುತಿರಲು, ನೀರೆ ನಿನ್ನ ಕಾಣಲ್ ॥ ೧ ॥ ಭಾವಜಾದಿಜನನೀ ಭಾರ್ಗವೀ ಕಲ್ಯಾಣಿ। ದೇವದೇವನರಾಣಿ, ಶ್ರೀಮತೀ ಪದ್ಮಿನಿ ॥ ೨ ॥ ಕ್ಷೀರವಾರಿಧಿಜಾತೆ, ಮಾರವೈರಿವಿನುತೆ । ವಾಂಜಾಸನಮಾತೆ, ಸಾರಿ ಬಾ ಪ್ರಖ್ಯಾತೆ ॥ ೩ ॥ ಶೇಷಶೈಲನಿಲಯೆ, ವಾಸವಾದಿಗೇಯೆ । ವಾಸು ದೇವಜಾಯೆ, ವಸುಮತೀ ತನಯೆ ॥ ೪ ॥

೬೫ ರಾಗಾ— (ಭಾವಜಾತನ ಸಂಜೀವನ)

ಕ್ಷೀರವಾರಿಧಿಜಾತೆ-ಚಾರುಸುಂದರಗಾತ್ರೆ। ಮಾರಜನಕದಯಿತೆ ॥ಪ॥ ಸಾರಸಾನನೆ ಮದ ವಾರಣಗಮನೆ ನಿನ್ನ—ತರುಣಿಯರೆಲ್ಲರು ವರ ಮಣಿಪೀಠಕೆ ॥ ಬಾರೆಂದು ಮುದದಿ ಕರೆವರು ॥ ಅ ॥ ಇಂದಿರಾ ದೇವಿ ಬಾ, ಇಂದುಸೋದರಿ ಬಾ, ಕುಂದಣದ ಹಸೆಗೆ ॥ ಮಂದಹಾ ಸವ ತೋರಿ, ಬಂದೆಮ್ಮ ಮನೆಯೊಳು, ಎಂದೆಂದಿಗು ಬಿಡದಾ-ನಂದವ ಬೀರೆಂದು ॥ ಬಾರೆಂದು ॥ ೧ ॥ ನಾಡಿಗೊಡೆಯ ಗರುಡ-ರೂಢ ನೆಂದೆನಿಸಿದ ಗಾಡಿಕಾರನಾ ಕೃಷ್ಣನ ॥ ಮಡದಿರನ್ನೆಯೆ ನಿನ್ನ ಪೊಡಮ ಟ್ಟು ಬೇಡುವ। ದೃಢಭಕ್ತರ ಕೈ-ಹಿಡಿದಾದರಿಸುತ್ತ॥ ಬಾರೆಂದು ॥೨॥ ಸುರನರಪೂಜಿತ ಚರಣಸರೋಜವ ನಿರುತಸೇವಿಪವರವ। ಕರುಣಿ ಸೆಂದೆನುತಲಿ ಕರಮುಗಿದೆರೆವೆನು, ವರಶೇಷಗಿರಿವಾಸ—ನರಸಿನೀನಲಿ ದಿಂದು ॥ ಬಾರೆಂದು ॥ ೩ ॥

೬೬ ರಾಗಾ— (ಏಳು ಭೂಪತಿ)

ಏಳುಪೀಠಕೆ-ನಳಿನಸಂಭವೆ-ಜಗನ್ನುತೆ ॥ ಪ ॥ ಬಾಲೇಂದು ನಿಭ ಫಾಲೆ-ಶ್ರಿತಪರಿಪಾಲೆ। ಕೋಮಲೆ॥ ಅ॥ ಸಿಂಧುನಂದನೆ ಇಂದುಸೋದ ರಿ-ಕುಂದರದನೆ ಮಂದಗಾಮಿನಿ ॥ ವಂದಿತಾಖಿಲ ಬೃಂದಾರಕವೃಂದಾ ನಂದಪ್ರದೆ ॥ ಏಳು ॥ ೧ ॥ ತೋರಮುತ್ತಿನ-ಚಾರುಪೀಠಕೆ । ಸಾರೈ ಬೇಗನೆ ಸಾರಸಾರ್ಣನೆ ॥ ನಾರೀರನ್ನೆಯನ ಸಾರಿಕರೆವರು ವಿಾರದಾ ನಂದದಿಂ ॥ ಏಳು ॥ ೨ ॥ ಶೇಷಶೈಲನಿವಾಸಿನೀ ನತಪೋಷಕಾರಿಣಿ ಶ್ರೀರಮಾಮಣಿ ॥ ಯಾಸಾಸಾರಸನೇತ್ರೆ ಕಮಲಾ-ವಾಸೇ-ದಯೆ ತೋರಿಸೆ ॥ ಏಳು ॥ ೩ ॥

Digitized by ROJA MUTHIAH RESEARCH LIBRARY

### ೬೭ (ಆರತಿಯೆತ್ತುವುದು)

ಕಲಶಾಬ್ಧಿಜಾತೆಸೀತೆಗಾರತಿಯನು ಬೆಳಗುವೆ ॥ ಲಲನಾಮಣಿಯ ಸೇರಿ ನುತಿಸಿ, ನಲಿದು ಪಾಡುವೆ ॥ ಅನು ॥ ಸರಸಿಜಾಸನಾದಿವಿನುತೆ, ಸುರವರಾರ್ಚಿತೆ । ಶರದಿಂದುಹಾಸೆ ಧರಣಿಜಾತೆ ಕರುಣಿಸೆನ್ನುತೆ ॥ ಕಲಶಾಬ್ಧಿ ॥ ೧ ॥ ಕಮಲವದನೆ ಕಮಲನಯನೆ ಕಮಲವಾಸಿನೀ । ವಿಮಲಚರಣೆ ರಾಮರಮಣಿ ಮಧುರಭಾಷಿಣಿ ॥ ಕಲಶಾಬ್ಧಿ ॥ ೨ ॥ ಶೇಷಶೈಲವಾಸದಯಿತೆ, ವಿಶ್ವಸನ್ನುತೆ । ಪೋಷಿಸೆನ್ನ ಜನಕಜಾತೆ, ಸೀತೆಯೆನ್ನುತೆ ॥ ಕಲಶಾಬ್ಧಿ ॥ ೩ ॥

### ೬೮ ॥ ಲಾಲಿ ॥

ಲಾಲಿಮನುಕುಲತಿಲಕ ಮದನಾರಿವಿನುತ । ಲಾಲಿಜನಕಜಾವಾತ ಜಾನಕೀಸಮೇತ ॥ ಲಾಲಿ ॥ ಪ ॥ ಕೌಸಲ್ಯಾಪ್ರಿಯಬಾಲ ಕನಕಮಯ ಚೇಲ । ಕೌಶಿಕಕ್ರತುಪಾಲ ಕರುಣಾಲವಾಲ । ಪೋಷಿತಾಮರಜಾಲ ಬಾಲೇಂದುನಿಭಫಾಲ । ದಶಕಂಠಮುಖಕಾಲ ಜಾನಕೀಲೋಲ ॥೧॥ ನಾಕೇಶಸುತಚರಣ ಸಕ್ತಂಚರಶಮನ । ಶ್ರೀಕಾಮಿನೀಸದನ ರಾಜೀವ ನಯನ ॥ ಲೋಕನಾಯಕಸರ್ವ । ಲೋಕಪಾಲಕದಿವ್ಯ । ಸಾಕೇತ ಪುರನಿಲಯ, ಸನಕಾದಿಗೇಯ ॥ ೨ ॥ ಈಶಸನ್ನುತನಾಮ ನೀಲನೀರ ಘಶ್ಯಾಮ । ಶೇಷಾದ್ರಿಶಿಖರಧಾಮ ಶ್ರೀರಾಮನಾಮ ॥ ಕ್ಲೇಶಪಾಶ ವಿರಾಮ ವಿಶ್ವಜನಪ್ರೇಮ । ಕೋಸಲಾಧಿಪರಾಮ ಪರಿಪೂರ್ಣಕಾಮ ॥ ಲಾಲಿ ॥ ೩ ॥

### (ಶಯನೋತ್ಸವ)

೬೯ (ಗಿಣಿಹಾಡಿನಮಟ್ಟು)

ಸರಸಿಜಾಲಯನೆನ್ನಿಪ-ಸೊಗಸಿನ-ವರರತ್ನ ಮಂಟಪದೊಳು । ಉರಗಪತಿಯಂತು ವರತಲ್ಪವಾಗಿರಲು, ಹರಿಸದಿಂದಲಿ ನೀಂ ಶಯನಿಸು ॥ ೧ ॥ ತಪನಶಶಿಗಳೆಂಬುವ-ಅಪ್ರತಿಹತ ದೀಪಗಳು ಪ್ರಜ್ವಲಿಸಲು, ಚಪಲಾಕ್ಷಿ ಶ್ರೀದೇವಿ-ಯುಪಚಾರದಿಂ ನಲಿದು, ಅಪರಿಮಿತಾನಂದದಿಂ ಶಯನಿಸು ॥ ೨ ॥ ತುಂಬರನಾರದರೆಂಬುವ ವಂದಿಮಾಗಧರ

Digitized by ROJA MUTHIAH RESEARCH LIBRARY



ತಂಬೂರಿಸ್ವರದಗಾನವ । ಸಂಭ್ರಮದಿ ಕೇಳುತ್ತ, ಅಂಬುಜೋದರ ವತಾತ, ಅಂಬುಜಾನನೆಯೊಡವೆರಸುತ-ನಲಿಯುತ ॥ ೩ ॥ ಗರುಡ ಪವನಜರೆಂಬುವ-ನಿನ್ನಂಘ್ರಿಸರಸಿಜವ ಸೇವಿಸುವ ॥ ವರಭಕ್ತರು ಬಂದು ಕರಮುಗಿದು ನಿಂದಿರಲು, ವರಯೋಗನಿದ್ರೆಯಿಂಕುಡುತೆ ಮುದವಂ॥ ॥೪॥ ವರಶೇಷಗಿರಿನಿಲಯನೆ, ಜಯಜಯತು॥ ವರದನಾರಾಯಣನೆ॥ ಕರವಿಡಿದು ಪೊರೆಯೆನ್ನ, ದೊರೆ ಮರೆಯೆನಾನಿನ್ನ । ಪರಮಮಂಗಳೆಯೊಡನೆ ನೀಂ ಪರಿಕಿಸೆನ್ನ ॥ ೫ ॥

### — ಮಂಗಳಂ —

೭೦ ರಾಗ— (ಮಂಗಳಂ ಸುಖದಾತ ಧೀರಗೆ)

ಮಂಗಳಂ ರಘುರಾಮಗೆ । ಜಯಮಂಗಳಂ ಗುಣಧಾಮಗೆ ॥ ಮಂಗಳಂ ಮದನಾರಿ ವಂದ್ಯಗೆ । ಮಂಗಳಂ ಮನ್ಮಥಗೆ ॥ ಪ ॥ ರಾಮಗೆ ನತಕಾಮಗೆ ಘನಶ್ಯಾಮಗೆ ಸುಪ್ರೇಮಗೆ । ಕಾಮಿತಪ್ರದಸೀಮಗೆ ವರ ರಾಮಣೀಯಕ ರೂಪಗೆ ॥ ೧ ॥ ಶ್ರೀಶಗೆ ಜಗದೀಶಗೆ ಭಯನಾಶಗೆ ಸರ್ವೇಶಗೆ ॥ ದಾಸಜನಮನೋಲ್ಲಾಸ ಲಕ್ಷ್ಮೀಶಕೇಶವ ಮೂರ್ತಿಗೆ ॥ ಮಂಗಳಂ ॥ ೨ ॥ ಮಾರುತಾತ್ಮಜಸಂಸೇವ್ಯಗೆ ನತ ಪಾರಿಜಾತ ಸಮಾನಗೆ ॥ ವಾರಿಜಾಯತನೇತ್ರ ಶ್ರೀ-ಶೇಷಶೈಲನಿವಾಸಗೆ ॥ ಮಂಗಳಂ ॥ ೩ ॥

— ಕೃಷ್ಣಾರ್ಪಣಮಸ್ತು —

Digitized by ROJA MUTHIAH RESEARCH LIBRARY

ದಿನಾಂಕ ಸೂಚಿ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಸರಸ್ವತಿ ಭಂಡಾರ

ವಿ. ಸೂ: ೧೫ ದಿನಗಳಿಗಿಂತ ಹೆಚ್ಚುಕಾಲ ಯಾರು ಪುಸ್ತಕವನ್ನಿಟ್ಟುಕೊಳ್ಳಲಾಗದು.

| ಹಿಂದಿರುಗಿಸುವ ದಿನ | ಹಿಂದಿರುಗಿಸುವ ದಿನ |
|---|---|

ಪುಸ್ತಕಸೂಚಿ

ವ. ಸಂ: NR N32·1

ಕ್ರ. ಸಂ: 4045·

ಲೇಖಕ: ಪ್ರಭು ( ಪ. ನಾರಾಂತತ್ತಣ )

ಶಿರೋನಾಮೆ: ಶೋಭನಾ ರತ್ನಾಕರ

ವ. ಸಂ: NR N16

ಕ್ರ. ಸಂ: 1700·

ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY